ದಕ್ಷಿಣ ಕರ್ನಾಟಕದಲ್ಲಿನ ಕಣಿಯ ಬುಡಕಟ್ಟು ಸಮುದಾಯದವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗಳ ಚಾರಿತ್ರಿಕ ಅಧ್ಯಯನ (ಕ್ರಿ.ಶ.1800 ರಿಂದ 1980 ರವರೆಗೆ)

ಪಿಹೆಚ್.ಡಿ; ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಸಂಶೋಧನಾ ಪ್ರಬಂಧದ ಅಂತಿಮ ಸಾರಲೇಖ

ಲೋಕೇಶ್ ಮೂರ್ತಿ. ಆರ್
ಸಂಶೋಧಕರು
REG No: MU/EXB/PHD/CR.08/HIST/2022-23/E13

ಪ್ರೊ.ನಿರ್ಮಲ್ ರಾಜು
ಮಾರ್ಗದರ್ಶಕರು

ಇತಿಹಾಸ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ

2025

ಪರಿವಿಡಿ

ಅಧ್ಯಾಯಗಳು ಪುಟ ಸಂಖ್ಯೆ

ಅಧ್ಯಾಯ–1 ಪೀಠಿಕೆ: ಅಧ್ಯಯನದ ಸ್ವರೂಪ– ಅಧ್ಯಯನದ ವ್ಯಾಪ್ತಿ– ಅಧ್ಯಯನದ ಉದ್ದೇಶ– ಅಧ್ಯಯನದ ಮಹತ್ವ–ಸಂಶೋಧನಾ ವಿಧಾನ–ಈವರೆಗಿನ ಕಣಿಯರ ಸಂಬಂಧಿತ ಗ್ರಂಥಗಳ ಚಾರಿತ್ರಿಕ ಸಮೀಕ್ಷೆ–ಆಕರಗಳು

ಅಧ್ಯಾಯ: 2 ಕರ್ನಾಟಕದಲ್ಲಿರುವ ಪ್ರಮುಖ ಬುಡಕಟ್ಟು ಜನಾಂಗಗಳ ಸಂಕ್ಷಿಪ್ತ ಇತಿಹಾಸ

ಅಧ್ಯಾಯ: 3 ಕಣಿಯ ಸಮುದಾಯದ ಮೂಲ ಮತ್ತು ಪ್ರಾಚೀನತೆ

ಅಧ್ಯಾಯ: 4 ದಕ್ಷಿಣ ಕರ್ನಾಟಕದ ಕಣಿಯ ಸಮುದಾಯದವರ ಆರ್ಥಿಕ ಪರಿಸ್ಥಿತಿ

ಅಧ್ಯಾಯ: 5 ದಕ್ಷಿಣ ಕರ್ನಾಟಕದ ಕಣಿಯ ಸಮುದಾಯದ ಸಾಮಾಜಿಕ ಜೀವನ

ಅಧ್ಯಾಯ: 6 ದಕ್ಷಿಣ ಕರ್ನಾಟಕದ ಕಣಿಯ ಸಮುದಾಯದವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತ್ಯಂತರಗಳ ಅನುಭವಾತ್ಮಕ ಅಧ್ಯಯನ

ಅಧ್ಯಾಯ: 7 ಅಧ್ಯಯನದಿಂದ ಹೊರಹೊಮ್ಮಿದ ಫಲಿತಾಂಶಗಳು (ಉಪಸಂಹಾರ)

ಅನುಬಂಧಗಳು

ಕೋಷ್ಟಕಗಳು

ಆಕರ ಗ್ರಂಥಗಳು

ಪ್ರಸ್ಥಾವನೆ: ದಕ್ಷಿಣ ಕರ್ನಾಟಕದಲ್ಲಿ ವಿಶೇಷವಾಗಿ ಕಂಡುಬರುವ ಕಣಿಯ ಬುಡಕಟ್ಟು ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗಳ ಚಾರಿತ್ರಿಕ ಅಧ್ಯಯನವು ಬಹಳ ವಿಶಿಷ್ಟ ಹಾಗೂ ಅನನ್ಯವಾಗಿದೆ. ಕರ್ನಾಟಕದಲ್ಲಿ ಚಾರಿತ್ರಿಕ ಭೂಗೋಳದ ಹಿನ್ನೆಲೆಯಲ್ಲಿ ಕಾಡುಕುರುಬ, ಜೇನುಕುರುಬ, ಬೆಟ್ಟಕುರುಬ, ಕಾಡುಗೊಲ್ಲ, ಸೋಲಿಗ, ಯರವ, ಓಡುಗ, ಬೇಡ, ಇರುಳಿಗ, ಮಲೆಕುಡಿಯ, ಕೊರಗ ಮುಂತಾದ ವಿವಿಧ ಬುಡಕಟ್ಟು ಸಮುದಾಯಗಳು ಕಂಡುಬರುತ್ತವೆ. ಈ ಅನುಸೂಚಿತ ಬುಡಕಟ್ಟು ಸಮುದಾಯಗಳಲ್ಲಿ ವಿಭಿನ್ನವಾದ ಬುಡಕಟ್ಟು ಸಮುದಾಯವೆಂದರೆ ಅದು ಕಣಿಯ ಸಮುದಾಯ.ಈ ಸಮುದಾಯವನ್ನು ಕಣಿಯ, ಕಣಿಯರು, ಕಣಿಯನ್, ಕಣಿಯರ್, ಕನ್ಯನ್ ಮುಂತಾದ ವಿವಿಧ ಹೆಸರುಗಳಿಂದಲೂ ಗುರುತಿಸುತ್ತಾರೆ.ತಮ್ಮದೇ ಸಾಮಾಜಿಕ ಹಾಗೂ ಸಾಂಸ್ಕೃತಿಕ ವಿಶಿಷ್ಟ ಚಹರೆಗಳನ್ನು ಹೊಂದಿರುವ ಈ ಸಮುದಾಯವು ದಕ್ಷಿಣ ಕರ್ನಾಟಕದ ಚಾಮರಾಜನಗರ, ಮೈಸೂರು, ಬೆಂಗಳೂರು, ಬೆಂಗಳೂರು ಗ್ರಾಮಾಂತರ, ರಾಮನಗರ, ಮಂಡ್ಯ, ಹಾಸನ, ತುಮಕೂರು, ಕೋಲಾರ ಇತ್ಯಾದಿ ಜಿಲ್ಲೆಗಳಲ್ಲಿ ಪ್ರಮುಖವಾಗಿ ಕಂಡುಬರುತ್ತಾರೆ. ಅರೆಅಲೆಮಾರಿ ಜೀವನ ಶೈಲಿಯನ್ನು ಅಳವಡಿಸಿಕೊಂಡಿರುವ ಇವರು ಕೃಷಿಯೊಂದಿಗೆ ಕಣಿಹೇಳುವುದು, ಜ್ಯೋತಿಷ್ಯ ನುಡಿಯುವುದು, ನಾಟಿ ಔಷಧ ನೀಡುವುದು, ಪಶುಪಾಲನೆ, ಕಿರುವ್ಯಾಪಾರ, ಬಟ್ಟೆ ತಯಾರಿಕೆ ಹಾಗೂ ಛತ್ರಿ ತಯಾರಿಕೆ ಮುಂತಾದ ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಕರ್ನಾಟಕದಲ್ಲಿ ಕಂಡುಬರುವ ಅತ್ಯಂತ ಹಿಂದುಳಿದ ಸಮುದಾಯಗಳಲ್ಲಿ ಒಂದು ಪ್ರಮುಖ ಜನಾಂಗವಾದ ಕಣಿಯ ಸಮುದಾಯದ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳ ಜನಾಂಗೀಯ ಅಧ್ಯಯನವು ಆಧುನಿಕೋತ್ತರ ಕರ್ನಾಟಕ ಇತಿಹಾಸ, ಸಂಸ್ಕೃತಿ ಮತ್ತು ಪರಂಪರೆಯಲ್ಲಿ ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತ.ಯಾವುದೇ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಾನಮಾನವಿಲ್ಲದ ಹಾಗೂ ಅತ್ಯಂತ ನಿರ್ಲಕ್ಷ್ಯಗೆ ಒಳಪಟ್ಟ ಅನೇಕ ಸಣ್ಣಪುಟ್ಟ ಕಾಯಕ ಸಮುದಾಯಗಳಲ್ಲಿ ಕಣಿಯ ಸಮುದಾಯವು ಸಹ ಒಂದು ಪ್ರಮುಖವಾದುದು. ತಲತಲಾಂತರದಿಂದಲೂ ಕಣಿ ಹೇಳುವುದು, ಜೋತಿಷ್ಯ ನುಡಿಯುವುದು ಮತ್ತು ಗಿಡಮೂಲಿಕೆ ಅಥವಾ ನಾಟಿ ಔಷಧಿ ನೀಡುವುದನ್ನು ತಮ್ಮ ಜೀವನೋಪಾಯದ ಕುಲಕಸುಬನ್ನಾಗಿ ರೂಢಿಸಿಕೊಂಡು ಬಂದಿರುವ ಕಣಿಯರು ದಕ್ಷಿಣ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ನೆಲೆಸಿದ್ದಾರೆ. ಆರಂಭದಲ್ಲಿ ಅಲೆಮಾರಿಗಳಾಗಿ ಪಶುಪಾಲನಾ ವೃತ್ತಿಯನ್ನು ಕೈಗೊಂಡಿದ್ದ ಈ ಸಮುದಾಯವು ಬುಡಕಟ್ಟು ಸಮುದಾಯಗಳಲ್ಲಿ ಒಂದಾಗಿತ್ತೆಂಬುದು ದಾಖಲೆಗಳಿಂದ ತಿಳಿದುಬರುತ್ತದೆ. ಎಡ್ಗರ್ಗ್ ಥರ್ಸ್ಟನ್‌ರವರು ಅಭಿಪ್ರಾಯಿಸಿರುವಂತೆ "ಜನರ ಜೀವನ ವಿಧಾನವೇ ಸಂಸ್ಕೃತಿ. ಜನರಿದ್ದ ಕಡೆ ಸಂಸ್ಕೃತಿ ಇದ್ದೇ ಇರುತ್ತದೆ. ಆದರೆ 'ಸಂಸ್ಕೃತಿ' ಒಂದೇ ತೆರನಾದುದಲ್ಲ; ಒಂದೇ ವಿನ್ಯಾಸದ್ದಲ್ಲ. ಒಂದೊಂದು ಪ್ರದೇಶದಲ್ಲಿ ಒಂದೊಂದು ಜನಾಂಗಕ್ಕೆ ಒಂದೊಂದು ರೀತಿಯ ಸಂಸ್ಕೃತಿ

ಇರಲು ಸಾಧ್ಯವಿದೆ. ಮನುಷ್ಯ ಸಂಸ್ಕೃತಿಯು ರೂಪುಗೊಳ್ಳುತ್ತಿರುವಾಗ ವಿವಿಧ ಕಾರಣಗಳಿಂದ ವಿಂಗಡಣೆಗೊಳಗಾದ ಮನುಷ್ಯ ಸಮಾಜ, ತನ್ನ ವಿಭಜಿತ ನೆಲೆಗಳಿಗನುಗುಣವಾಗಿ ವಿಭಿನ್ನ ಸಂಸ್ಕೃತಿಗಳನ್ನು ರೂಪಿಸಿ ಪೋಷಿಸಿಕೊಳ್ಳುತ್ತಾ ಬಂದಿರುವುದು ಒಂದು ಚಾರಿತ್ರಿಕ ಸಂಗತಿಯೇ ಆಗಿದೆ".

ಕರ್ನಾಟಕದ ಸಾಮಾಜಿಕ ಹಾಗೂ ಜನಾಂಗೀಯ ಇತಿಹಾಸದ ಹಿನ್ನೆಲೆಯಲ್ಲಿ ಕಣಿಯ ಸಮುದಾಯದವರು ಸಾಮಾನ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದರೆ; ನಗರ ಪಟ್ಟಣ ಪ್ರದೇಶಗಳಲ್ಲಿ ತೆಳುವಾಗಿ ಕಾಣಿಸಿಕೊಳ್ಳುತ್ತಾರೆ. ಆಹಾರ, ಉಡುಗೆ ತೊಡುಗೆ, ಉದ್ಯೋಗ, ಕುಟುಂಬ ಪದ್ಧತಿ, ಜನನ, ನಾಮಕರಣ, ವಿವಾಹ, ಶವ ಸಂಸ್ಕಾರ ಮುಂತಾದ ಚಟುವಟಿಕೆ ಮತ್ತು ಆಚರಣೆಗಳನ್ನು ಕುರಿತಂತೆ ಯಾವುದೇ ಅಧಿಕೃತ ದಾಖಲೆಗಳು ಕಂಡುಬರುವುದಿಲ್ಲ. ಇವರು ಬುಡಕಟ್ಟು ಸಮುದಾಯದವರಾಗಿದ್ದರೂ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಕಣಿಯರನ್ನು ಹೊರತುಪಡಿಸಿ ಕರ್ನಾಟಕದ ಉಳಿದ ಕಡೆಗಳಲ್ಲಿ ವಾಸಿಸುವ ಕಣಿಯರನ್ನು 2ಎ ವರ್ಗಕ್ಕೆ ಸೇರಿಸಿರುವ ಬಹಳ ಆಶ್ಚರ್ಯಕರ ಹಾಗೂ ದ್ವಂದ್ವ ನೀತಿಯನ್ನು ಕಾಣಬಹುದು. ದಕ್ಷಿಣ ಕರ್ನಾಟಕದಲ್ಲಿ ವಾಸಿಸುತ್ತಿರುವ ಇತರೆ ಅನುಸೂಚಿತ ಬುಡಕಟ್ಟು ಸಮುದಾಯಗಳ ಜೀವನ ಪರಿಸ್ಥಿತಿಗೂ ಕಣಿಯರ ಜೀವನ ಸ್ಥಿತಿಗತಿಗಳಿಗೂ ತುಂಬಾ ವ್ಯತ್ಯಾಸವಿರುವುದನ್ನು ಕಾಣಬಹುದೆಂಬ ಬಿ.ಎಲ್.ರೈಸ್‌ರವರ ಅಭಿಪ್ರಾಯ ಇಲ್ಲಿ ಗಮನಾರ್ಹ ವಾದದ್ದು.ಈ ಹಿನ್ನೆಲೆಯಲ್ಲಿ ಕಣಿಯ ಸಮುದಾಯದ ಚಾರಿತ್ರಿಕ ಅಧ್ಯಯನ ಬಹಳ ಮಹತ್ವವಾಗಿದೆ.

ಜಾಗತೀಕರಣೋತ್ತರ ಕಾಲದ ಪ್ರಸ್ತುತ ಸಂದರ್ಭದಲ್ಲಿ ಅಭಿವೃದ್ಧಿಯ ಹೆಸರಿನಲ್ಲಿ ಬುಡಕಟ್ಟು ಜನರ ಮೇಲೆ ಅನೇಕ ಬಗೆಯ ಶೋಷಣೆಗಳು ದುಷ್ಟ ಪ್ರಭಾವ ಬೀರಬಲ್ಲ ಆಚರಣೆಗಳು ರೂಢಿಗೆ ಬರುತ್ತಿವೆ. ಆಧುನಿಕತೆಯ ಪರಿಣಾಮಗಳಿಂದಾಗಿ ಬುಡಕಟ್ಟು ಜನರ ಆರ್ಥಿಕ ಚಟುವಟಿಕೆಗಳು, ಸಾಮಾಜಿಕ ಜೀವನ ಕ್ರಮ, ಮತಧರ್ಮ ಮತ್ತು ದೈವನಂಬಿಕೆಗಳು ಸಾಕಷ್ಟು ಬದಲಾವಣೆ ಕಾಣುತ್ತಿವೆ. ಬುಡಕಟ್ಟು ಜನರ ನಂಬಿಕೆಗಳು ಮೂಢನಂಬಿಕೆಗಳಾಗಿದ್ದರೂ ಅವುಗಳಿಂದ ಪರಿಸರಕ್ಕಾಗಲೀ ಸಮಾಜಕ್ಕಾಗಲೀ ಯಾವುದೇ ರೀತಿಯ ಹಾನಿಯಾಗುತ್ತಿರಲಿಲ್ಲ. ಬದಲಾಗಿ ಹಿತವಾದ ಪರಿಣಾಮ ಉಂಟಾಗುತ್ತಿತ್ತು.ಒಂದು ರೀತಿಯಲ್ಲಿ ಅವರು ಅರಣ್ಯ ಸಂಪ್ರದಾಯ, ಸಂಸ್ಕೃತಿ ಮತ್ತು ನೈಸರ್ಗಿಕ ಧರ್ಮದ ಸಂರಕ್ಷಕರೆಂದರೆ ಅತಿಶಯೋಕ್ತಿಯೇನಲ್ಲ. ಆದರೆ ಇಂತಹ ಬುಡಕಟ್ಟು ಸಮುದಾಯಗಳ ಬದುಕು ಪ್ರಸ್ತುತ ಹಾಳಾಗುತ್ತಿರುವುದು ಶೋಚನೀಯ. ಅದಕ್ಕೆ ಕಾರಣ ಸರ್ಕಾರ ಮತ್ತು ಸಮಾಜ.ಅಭಿವೃದ್ಧಿಯ ಹೆಸರಿನಲ್ಲಿ ಅವರ ಸಾಮಾಜಿಕ ಜೀವನ ಕ್ರಮದ ಮೇಲೆ ಧನಾತ್ಮಕ ಪರಿಣಾಮಗಳನ್ನು ಬೀರದೆ ಅವರು ನೆಮ್ಮದಿಯಾಗಿ ಬದುಕಲು ಸರ್ಕಾರ ಸಾಕಷ್ಟು ಅವಕಾಶಗಳನ್ನು

ದೊರಕಿಸಿ ಕೊಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಅತ್ಯಂತ ಹಿಂದುಳಿದ, ನಿರ್ಲಕ್ಷಿತ ಹಾಗೂ ಅಲ್ಪಸಂಖ್ಯಾತ ಬುಡಕಟ್ಟು ಸಮುದಾಯವಾದ ಕಣಿಯರ ಅಧ್ಯಯನವನ್ನು ಕೈಗೊಳ್ಳಲಾಗಿದೆ.

1.2 ಅಧ್ಯಯನದ ಸ್ವರೂಪ: ಪ್ರಸ್ತುತ ಅಧ್ಯಯನವು ಕಣಿಯ ಬುಡಕಟ್ಟು ಸಮುದಾಯದ ಮೂಲ, ಪ್ರಾಚೀನತೆ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಸ್ಥಿತಿಗತಿಗಳು ಮತ್ತು ಅವರ ಜೀವನ ಕ್ರಮದ ಸ್ಥಿತ್ಯಂತರದ ಪ್ರಕ್ರಿಯೆಗಳನ್ನು ಕುರಿತು ವಿವಿಧ ಕಾಲಘಟ್ಟಗಳಲ್ಲಿ ಅಂದರೆ ಕ್ರಿ.ಶ.1800 ರಿಂದ 1980ರವರೆಗೆ ಕಣಿಯರ ಪರಿಸ್ಥಿತಿಗಳು ಹೇಗಿದ್ದವು? ಅವರ ಜೀವನ ಶೈಲಿಯಲ್ಲಿ ಪ್ರಮುಖವಾಗಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ಥಿತ್ಯಂತರಗಳಿಗೆ ಕಾರಣಗಳೇನು? ಇತ್ಯಾದಿಗಳ ಜೊತೆಗೆ ಇತರ ಅಂಶಗಳನ್ನು ಕುರಿತು ಚಾರಿತ್ರಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಭಾರತದಲ್ಲಿ ವಿವಿಧ ಬುಡಕಟ್ಟು ಜನಾಂಗಗಳ ಕುರಿತು ಬೇರೆ ಬೇರೆ ರಾಜ್ಯಗಳಲ್ಲಿ ಹಲವಾರು ಅಧ್ಯಯನಗಳು ನಡೆದಿವೆ. ಆದಿವಾಸಿಗಳ ಜೀವನ ಕ್ರಮಕ್ಕೆ ಸಂಬಂಧಿಸಿದಂತೆ ವರದಿಗಳು, ಲೇಖನಗಳು, ಪುಸ್ತಕಗಳು ಪ್ರಕಟಗೊಂಡಿವೆ. ಆದರೆ ಕಣಿಯ ಜನಾಂಗವನ್ನು ಕುರಿತಂತೆ ಯಾವುದೇ ಶಾಸ್ತ್ರೀಯ ಅಥವಾ ಕ್ರಮಬದ್ಧವಾದ ಸಂಶೋಧನಾ ಅಧ್ಯಯನವು ನಡೆದಿಲ್ಲ. ಆದುದರಿಂದ ಕಣಿಯರ ಜೀವನಕ್ರಮ, ಅವರ ಆರ್ಥಿಕ ಚಟುವಟಿಕೆಗಳು, ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗಳನ್ನು ಕುರಿತಂತೆ ಚಾರಿತ್ರಿಕ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಮೂಲ ನಿವಾಸಿ ಅಥವಾ ಆದಿವಾಸಿಗಳ ಬದುಕಿನ ಹಂದರಗಳು ಹಾಗೂ ಜನಪದರ ಕಾವ್ಯ ಪರಂಪರೆಗಳು ಮಿಗಿಲಾಗಿ ಐತಿಹ್ಯಗಳು ಬುಡಕಟ್ಟು ಸಮುದಾಯಗಳ ಸಂಸ್ಕೃತಿಯನ್ನು ಜೀವಂತವಿರಿಸಿವೆ. ನಗರ ಮತ್ತು ಗ್ರಾಮ ಸಂಸ್ಕೃತಿಗಳನ್ನು ಮೀರಿದ ಭಿನ್ನವಾದ ಸಂಸ್ಕೃತಿಯೊಂದು ಕಾಡಿನಲ್ಲಿ ಅಥವಾ ಕಾಡಂಚಿನಲ್ಲಿರುವ ಗ್ರಾಮೀಣ ಪ್ರದೇಶಗಳಲ್ಲಿ ಉಸಿರಾಡುತ್ತಿದೆ ಎಂದರೆ ಅದು ಬುಡಕಟ್ಟು ಸಮುದಾಯದ ಮೂಲ ಆಶಯದ ಬದುಕು. ತಮ್ಮದೇ ಆದಂತಹ ಆಚಾರ ವಿಚಾರ, ಭಾಷೆ ಸಂವಾದ, ಬದುಕಿನ ಶೈಲಿ, ನಂಬಿದ ಮೌಲ್ಯಗಳಾಗಿ ಅನುಸರಿಸುವ ಸಾಂಪ್ರದಾಯಿಕ ಪದ್ಧತಿಗಳು, ಇಟ್ಟುಕೊಂಡಿರುವ ಆಶಯಗಳು, ಸಾಮಾಜಿಕ ರೀತಿ ನೀತಿಗಳು, ಅವರದೇ ಆದ ಕಲೆ, ಮುಂತಾದ ಅಂಶಗಳನ್ನೆಲ್ಲಾ ಅರಗಿಸಿ ಕೊಂಡಿರುವ ಈ ಮೂಲ ನಿವಾಸಿಗಳನ್ನು ಬುಡಕಟ್ಟು ಜನಾಂಗ ಎಂದು ಪರಿಗಣಿಸಬಹುದಾಗಿದೆ. ಈ ಬುಡಕಟ್ಟು ಸಮುದಾಯದ ಜನರು ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಮುಖ್ಯ ವಾಹಿನಿಯಲ್ಲಿ ಬೆರೆಯುವುದಿಲ್ಲ, ವಿವಾಹ, ಹುಟ್ಟು, ಸಾವು, ಶುಭ ಸಮಾರಂಭಗಳು, ಧಾರ್ಮಿಕ ಆಚರಣೆ ಇತ್ಯಾದಿಗಳನ್ನು ತಮ್ಮದೇ ಆದ ಸಂಪ್ರದಾಯದಂತೆ ಆಚರಿಸುತ್ತಾರೆ. ಆದುದರಿಂದ ಪ್ರಸ್ತುತ ಅಧ್ಯಯನದಲ್ಲಿ ದಕ್ಷಿಣ ಕರ್ನಾಟಕದಲ್ಲಿ ವಿಶೇಷವಾಗಿ

ಕಂಡುಬರುವ ಕಣಿಯ ಸಮುದಾಯದವರ ಕುಟುಂಬ ಸ್ವರೂಪ, ಆಹಾರ ಪದ್ದತಿ, ಉಡುಗೆ ತೊಡುಗೆ, ಶವ ಸಂಸ್ಕಾರ, ಕುಲಕಸುಬು, ಹಬ್ಬಗಳ ಆಚರಣೆ, ಧಾರ್ಮಿಕ ಆಚರಣೆ, ರಾಜಕೀಯ ಸ್ಥಿತಿ, ವಿದ್ಯಾಭ್ಯಾಸದ ಮಟ್ಟ ಮತ್ತು ಬದುಕಿನ ಶೈಲಿ, ಸಮಗ್ರ ಸಾಮಾಜಿಕ ಪರಿಸ್ಥಿತಿಗಳೊಂದಿಗೆ ಪ್ರಸ್ತುತ ಕಣಿಯರು ಎದುರಿಸುತ್ತಿರುವ ಸವಾಲು ಮತ್ತು ಸಮಸ್ಯೆಗಳನ್ನು ಕುರಿತು ಸೂಕ್ಷ್ಮವಾಗಿ ಅಧ್ಯಯನ ಮಾಡಲಾಗಿದೆ.

1.3 ಅಧ್ಯಯನದ ವ್ಯಾಪ್ತಿ: ಪ್ರಸ್ತುತ ಅಧ್ಯಯನವನ್ನು ಕ್ರಿ.ಶ.1800ರಿಂದ ಕ್ರಿ.ಶ.1980ರವರೆಗೆ ಸಮಾಜಶಾಸ್ತ್ರ, ಮಾನವಶಾಸ್ತ್ರ, ಇತಿಹಾಸ ಮುಂತಾದ ಮಾನವಿಕ ಶಾಸ್ತ್ರಗಳನ್ನೊಳಗೊಂಡ ಜನಾಂಗೀಯ ಅಧ್ಯಯನವನ್ನು ಕುಲ ಶಾಸ್ತ್ರೀಯ ಚೌಕಟ್ಟಿನಲ್ಲಿ ಕೈಗೊಳ್ಳಲಾಗಿದೆ. 1947ರಲ್ಲಿ ಭಾರತದ ಸ್ವಾತಂತ್ರ್ಯ ತರುವಾಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮಾಜ ಕಲ್ಯಾಣ ಇಲಾಖೆಯ ಮೂಲಕ ಹಿಂದುಳಿದ, ಅತೀ ಹಿಂದುಳಿದ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಅಲ್ಪಸಂಖ್ಯಾತರು ಮೊದಲಾದ ದುರ್ಬಲ ವರ್ಗಗಳ ಏಳಿಗೆಗಾಗಿ ಹಲವು ಅಭಿವೃದ್ಧಿಪರ ಕಾರ್ಯಕ್ರಮಗಳನ್ನು ಜಾರಿಗೆ ತರಲು ನಿರ್ಧರಿಸಿದವು.ಎಲ್ಲಕ್ಕಿಂತ ಮಿಗಿಲಾಗಿ 1950 ಜನವರಿ 26 ರಂದು ಜಾರಿಗೆ ಬಂದ ಸಂವಿಧಾನದ ಮೂಲಕ ಶೋಷಿತ ವರ್ಗಗಳ ಕಲ್ಯಾಣಕ್ಕೆ ಭರವಸೆಯನ್ನು ಸಹ ನೀಡಲಾಯಿತು.ಈ ಹಿನ್ನೆಲೆಯಲ್ಲಿ ಸ್ಥಾಪನೆಗೊಂಡ ಯೋಜನಾ ಆಯೋಗ ಮತ್ತು ಪಂಚವಾರ್ಷಿಕ ಯೋಜನೆಗಳ ಮೂಲಕ ಹಿಂದುಳಿದ ಹಾಗೂ ದುರ್ಬಲ ವರ್ಗಗಳ ಪ್ರಗತಿಯನ್ನು ಸಾಧಿಸುವ ಪ್ರಯತ್ನದಲ್ಲಿ ಸ್ವಲ್ಪಮಟ್ಟಿಗಾದರು ಯಶಸ್ಸು ಸಿಕ್ಕಿದೆಯೆಂದರೆ ಅತಿಶಯೋಕ್ತಿಯಾಗಲಾರದು.

ಕೇಂದ್ರ ಸರ್ಕಾರದಂತೆ ಕರ್ನಾಟಕ ರಾಜ್ಯ ಸರ್ಕಾರವು ಸಹ ಅನೇಕ ಹಿಂದುಳಿದ ವರ್ಗಗಳ ಆಯೋಗಗಳನ್ನು ನೇಮಿಸಿ, ಆ ಆಯೋಗಗಳ ಶಿಫಾರಸ್ಸುಗಳನ್ನು ಜಾರಿ ಮಾಡಿದ ಫಲವಾಗಿ ಹಿಂದುಳಿದ ಮತ್ತು ಅತೀ ಹಿಂದುಳಿದ ವರ್ಗಗಳು ವಿಶೇಷವಾಗಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳಿಗೆ ಸೇರಿದ ಜನರಿಗೆ ರಾಜಕೀಯ ಅಧಿಕಾರದೊಂದಿಗೆ ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಮೀಸಲಾತಿ ಸೌಕರ್ಯಗಳು ಲಭಿಸಿದವು.ಕಣಿಯ ಸಮುದಾಯವನ್ನು ಕುರಿತು ಪ್ರಸ್ತುತ ಸಂಶೋಧನಾ ಅಧ್ಯಯನದ ಭೌಗೋಳಿಕ ವ್ಯಾಪ್ತಿಯು ದಕ್ಷಿಣ ಕರ್ನಾಟಕದ ಜಿಲ್ಲೆಗಳಾದ ಚಾಮರಾಜನಗರ, ಮೈಸೂರು, ಬೆಂಗಳೂರು, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಮಂಡ್ಯ, ಹಾಸನ ಮುಂತಾದ ಜಿಲ್ಲೆಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ. ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳ ಗ್ರಾಮಾಂತರ ಪ್ರದೇಶಗಳ ಆಯ್ದ ಕೆಲವು ಪ್ರಮುಖ ಕಣಿಯರ ನೆಲೆಗಳನ್ನು ವಿಶೇಷವಾಗಿ ಆಯ್ಕೆ ಮಾಡಿಕೊಂಡು; ಅನುಭವಾತ್ಮಕ (ಎಂಪೈರಿಕಲ್ ಸ್ಟಡಿ) ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ.

ಕಣಿಯ ಬುಡಕಟ್ಟು ಸಮುದಾಯದವರ ಸಾಕ್ಷರತಾ ಪ್ರಮಾಣವು ಬಹಳ ಕಡಿಮೆಯಿರುವುದರಿಂದ ಪರಿಮಣಾತ್ಮಕ(ಕ್ವಾಂಟಿಟೇಟಿವ್) ವಿಧಾನದ ಮೂಲಕ ಪರಿಶೀಲಿಸಲು ಪ್ರಯತ್ನಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಂಶೋಧನಾ ವಿಷಯವನ್ನು ಒಟ್ಟು ಏಳು ಅಧ್ಯಾಯಗಳಾಗಿ ವಿಂಗಡಿಸಿಕೊಂಡು ಅಧ್ಯಯನ ನಡೆಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಸ್ವರೂಪ, ಅಧ್ಯಯನದ ವ್ಯಾಪ್ತಿ, ಅಧ್ಯಯನದ ಮಹತ್ವ, ಅಧ್ಯಯನದ ಉದ್ದೇಶ, ಚಾರಿತ್ರಿಕ ಬರಹಗಳ ಸಮೀಕ್ಷೆ, ಸಂಶೋಧನಾ ವಿಧಾನ, ಆಕರಗಳು ಪ್ರಾಥಮಿಕ, ಅನುಷಂಗಿಕ ಆಧಾರಗಳು, ಅನುಭವಾತ್ಮಕ ಅಧ್ಯಯನ, ಪರಿಮಣಾತ್ಮಕ ವಿಧಾನ ಮತ್ತು ಮೌಖಿಕ ಚರಿತ್ರೆಯ ಮಾದರಿಗಳು (ಕ್ಷೇತ್ರ ಕಾರ್ಯ) ಮುಂತಾದವುಗಳನ್ನು ಕುರಿತು ವಿವರಿಸಲಾಗಿದೆ. ಅಧ್ಯಾಯ ಎರಡರಲ್ಲಿ ಕರ್ನಾಟಕದಲ್ಲಿರುವ ಪ್ರಮುಖ ಬುಡಕಟ್ಟು ಜನಾಂಗಗಳ ಸಂಕ್ಷಿಪ್ತ ಇತಿಹಾಸವನ್ನು ಕುರಿತು ಭಾರತೀಯ ಆದಿವಾಸಿ ಅಥವಾ ಬುಡಕಟ್ಟು ಸಮಾಜದ ರಚನೆ, ಸ್ವರೂಪ, ಗುಣಲಕ್ಷಣಗಳು ಇತ್ಯಾದಿಗಳ ಹಿನ್ನೆಲೆಯಲ್ಲಿ ಪರಿಶೀಲಿಸಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಕಣಿಯ ಸಮುದಾಯದ ಪ್ರಾಚೀನತೆ, 'ಕಣಿಯ' ಪದದ ನಿಷ್ಪತ್ತಿ, ಅರ್ಥ ಹಾಗೂ ಕಣಿಯರ ಮೂಲವನ್ನು ಕುರಿತು ಪೌರಾಣಿಕ, ಜಾನಪದೀಯ ಹಾಗೂ ಚಾರಿತ್ರಿಕ ಹಿನ್ನೆಲೆಯಲ್ಲಿ ಸಂಬಂಧಿಸಿದ ಐತಿಹ್ಯ ಮತ್ತು ದಂತ ಕಥೆಗಳು ಮುಂತಾದವುಗಳನ್ನು ಚರ್ಚಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಕಣಿಯ ಸಮುದಾಯದ ಆರ್ಥಿಕ ಚಟುವಟಿಕೆಗಳಾದ ಮೂಲ ವೃತ್ತಿ ಹಾಗೂ ಪ್ರವೃತ್ತಿಗಳಾದ ಬೇಟೆ, ಪಶುಪಾಲನೆ, ಕುಲಕಸುಬು, ವೃತ್ತಿ ವಿಶಿಷ್ಟತೆಗಳಾದ ಕಣಿ ಹೇಳುವುದು, ಜೋತಿಷ್ಯ ನೋಡುವುದು ಮತ್ತು ಗಿಡಮೂಲಿಕೆ (ನಾಟಿ)ಔಷಧಿಗಳ ಮಾರಾಟ, ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳು, ಸಣ್ಣ ಅಥವಾ ಕಿರಿದಾದ ವ್ಯಾಪಾರ ವಹಿವಾಟುಗಳು, ವಿಶೇಷವಾಗಿ ವಸಾಹತುಶಾಹಿ ಆಳ್ವಿಕೆ ಹಾಗೂ ಇತ್ತೀಚಿನ ಜಾಗತೀಕರಣದ ಪ್ರಭಾವದಿಂದ ಕಣಿಯರ ಕುಲಕಸುಬು ಮತ್ತು ಆರ್ಥಿಕ ಪರಿಸ್ಥಿತಿಯ ಮೇಲೆ ಉಂಟಾದ ಪರಿಣಾಮಗಳನ್ನು ಆಧುನಿಕತೆಯ ಸ್ಥಿತ್ಯಂತರದೊಂದಿಗೆ ಅನ್ವಯಿಸಿ ವಿವರಿಸಲಾಗಿದೆ. ಐದನೆಯ ಅಧ್ಯಾಯದಲ್ಲಿ ಕಣಿಯರ ಸಮುದಾಯದ ಸಾಮಾಜಿಕ ವ್ಯವಸ್ಥೆಯನ್ನು ಚರ್ಚಿಸಲಾಗಿದೆ. ಕಣಿಯರ ಜೀವನ ಕ್ರಮ, ಆಹಾರ ಪದ್ದತಿ, ಉಡುಗೆ ತೊಡುಗೆ, ವೇಷಭೂಷಣ, ಕೌಟುಂಬಿಕ ವ್ಯವಸ್ಥೆ, ಕುಲ ಸೇರುವ ಪದ್ದತಿ, ಮಹಿಳೆಯರ ಸ್ಥಾನಮಾನ, ಸಾಂಸ್ಕೃತಿಕ ಆಚರಣೆಗಳು, ನ್ಯಾಯಪದ್ಧತಿ ಮುಂತಾದವುಗಳನ್ನು ಕುರಿತು ವಿವರಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ಥಿತ್ಯಂತರದ ಪ್ರಭಾವದಿಂದ ಕಣಿಯರ ಭಾಷೆ, ಕಲೆ, ಸಂಗೀತ ಮತ್ತು ಕಣಿಯರು ಬಳಸುವ ಪದಗಳು, ಕಣಿಯರ ಧಾರ್ಮಿಕ ಆಚರಣೆಯಲ್ಲಿ ಭಜನೆ ಮತ್ತು ಭಕ್ತಿ ಗೀತೆಗಳ ಪಾತ್ರ, ಮನರಂಜನೆಯ ಚಟುವಟಿಕೆಗಳು ಇತ್ಯಾದಿಗಳನ್ನು ಚರ್ಚಿಸಲಾಗಿದೆ. ಒಟ್ಟಾರೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತ್ಯಂತರದ ವಿವಿಧ ಪ್ರಕ್ರಿಯೆಗಳನ್ನು ಅನುಭವಾತ್ಮಕ ಅಧ್ಯಯನ ಮತ್ತು ಪರಿಮಣಾತ್ಮಕ ಮಾದರಿಗಳನ್ನು ಅನ್ವಯಿಸಿಕೊಂಡು ಕೋಷ್ಟಕ, ಅಂಕಿಅಂಶ ಮುಂತಾದವುಗಳ ಸಮೇತ ವಿಶ್ಲೇಷಣೆ ಮಾಡಲಾಗಿದೆ. ಕೊನೆಯ ಅಧ್ಯಾಯದಲ್ಲಿ ಒಟ್ಟು ಅಧ್ಯಯನದಿಂದ ಹೊರ ಹೊಮ್ಮಿದ ಫಲಿತಾಂಶಗಳನ್ನು ಉಪಸಂಹಾರದ ರೂಪದಲ್ಲಿ ಚರ್ಚಿಸಲಾಗಿದೆ. ಅಧ್ಯಯನದ ಕೊನೆಯಲ್ಲಿ ಅನುಬಂಧಗಳು, ಕ್ಷೇತ್ರಕಾರ್ಯದ ಸಂದರ್ಭಗಳಲ್ಲಿ ಸಂಗ್ರಹಿಸಿದ ಸಮಗ್ರ ಮಾಹಿತಿಗಳ ವಿವರಗಳನ್ನು ಕೋಷ್ಟಕಗಳ ವಿವರಣೆಗಳೊಂದಿಗೆ ನೀಡಲಾಗಿದೆ. ಜೊತೆಗೆ ಗ್ರಂಥಪಟ್ಟಿ ಮತ್ತು ಛಾಯಾಚಿತ್ರಗಳನ್ನು ಸಹ ಸೇರಿಸಲಾಗಿದೆ.

1.4 ಅಧ್ಯಯನದ ಉದ್ದೇಶ: ದಕ್ಷಿಣ ಕರ್ನಾಟಕದಲ್ಲಿ ವಿಶೇಷವಾಗಿ ಕಂಡುಬರುವ ಕಣಿಯ ಬುಡಕಟ್ಟು ಸಮುದಾಯದವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗಳ ಚಾರಿತ್ರಿಕ ಅಧ್ಯಯನವು ಬಹಳ ವಿಶಿಷ್ಟತೆ ಹಾಗೂ ಮಹತ್ವವನ್ನು ಪಡೆದುಕೊಂಡಿದೆ. ಪ್ರಸ್ಥುತ ಅಧ್ಯಯನದ ಪ್ರಮುಖ ಉದ್ದೇಶವೇನೆಂದರೆ ಅತ್ಯಂತ ನಿರ್ಲಕ್ಷ್ಯತೆ ಹಾಗೂ ತಿರಸ್ಕಾರಕ್ಕೆ ಒಳಪಟ್ಟ ಮತ್ತು ಬಹಳ ಹಿಂದುಳಿದ ಕಣಿಯ ಸಮುದಾಯದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಕುರಿತು ಈ ಹಿಂದಿನ ಮೈಸೂರು ಪ್ರಾಂತ್ಯಕ್ಕೆ ಸೇರಿದ ಧಕ್ಷಿಣ ಕರ್ನಾಟಕದ ವಿವಿಧ ಜಿಲ್ಲೆಗಳಿಗೆ ಅನ್ವಯಿಸಿ ಅಧ್ಯಯನ ಕೈಗೊಳ್ಳಲಾಗಿದೆ. 12ನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ಸಂಭವಿಸಿದ ಧಾರ್ಮಿಕ ಹಾಗೂ ಸಾಮಾಜಿಕ ಕ್ರಾಂತಿಯ ನಂತರ ವೀರಶೈವ ಧರ್ಮವು ಹೊಸ ಸ್ವರೂಪವನ್ನು ಪಡೆಯಿತು. ಜನತೆಯಲ್ಲಿ ಆಧ್ಯಾತ್ಮಿಕತೆ ಹಾಗೂ ನೈತಿಕ ಮೌಲ್ಯಗಳನ್ನು ಹೆಚ್ಚಿಸುವುದರ ಜೊತೆಗೆ ಅವರ ಸಂಘಟನೆಯ ಹೊಣೆಗಾರಿಕೆಯೊಂದಿಗೆ ಅತ್ಯಂತ ಹಿಂದುಳಿದ ಮತ್ತು ಕಾಯಸ್ಥ ಸಮುದಾಯಗಳ ವಿಮೋಚನೆಗಾಗಿ ಶ್ರಮ ಶಕ್ತಿಯನ್ನು ಪ್ರೋತ್ಸಾಹಿಸಿ ಎತ್ತಿ ಹಿಡಿಯುವ ಪ್ರಯತ್ನವನ್ನು ಸಹ ಮಾಡಿತು. ಸತ್ಪರಿಣಾಮವಾಗಿ ಹಿಂದುಳಿದವರಿಗೆ ಆರ್ಥಿಕ ಮತ್ತು ಧಾರ್ಮಿಕ ವಿಚಾರಗಳಲ್ಲಿ ಮಾರ್ಗದರ್ಶನ ನೀಡುವುದಲ್ಲದೆ; ಸಂಘಟನೆಯಿಂದ ಪಡೆಯಬಹುದಾದ ಲೌಕಿಕ ವಿಚಾರಗಳ ಸಾಧನೆಯತ್ತ ಸಮಾಜವನ್ನು ಜಾಗೃತಿಗೊಳಿಸಿದರು. ಕರ್ನಾಟಕದಾದ್ಯಂತ ಕ್ರಿಶ್ಚಿಯನ್ ಮಿಷನರಿಗಳು ಶಿಕ್ಷಣ ಪ್ರಸಾರ ಹಾಗೂ ಸಮಾಜ ಸೇವಾ ಕಾರ್ಯಗಳನ್ನು ಮೊದಲ ಬಾರಿಗೆ ಶ್ರದ್ಧೆಯಿಂದ ಕೈಗೆತ್ತಿಕೊಂಡರು. ಇಂದು ಕರ್ನಾಟಕವು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಇಡೀ ಭಾರತ ಹಾಗೂ ವಿಶ್ವದ ಗಮನ ಸೆಳೆದಿದ್ದರೆ ಅದಕ್ಕೆ ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಣಾ ಸಂಸ್ಥೆಗಳು ಕೈಗೊಂಡ ಶೈಕ್ಷಣಿಕ ಸೇವೆಯೇ ಕಾರಣ ಎನ್ನಬಹುದು.

1.5 ಅಧ್ಯಯನದ ಮಹತ್ವ: ಭಾರತದಲ್ಲಿ 18ನೇ ಶತಮಾನದ ಕೊನೆಗೆ ವಿಶೇಷವಾಗಿ ವಸಹಾತುಶಾಹಿ ಆಡಳಿತದ ಪ್ರಭಾವದ ಹಿನ್ನೆಲೆಯಲ್ಲಿ ಬುಡಕಟ್ಟು ಸಮುದಾಯಗಳನ್ನು ಕುರಿತಾದ ಜನಾಂಗೀಯ ಅಧ್ಯಯನ ಕ್ರಮವು ಪ್ರಾರಂಭವಾಯಿತು. ಬುಡಕಟ್ಟು ಜನಾಂಗಗಳ ಶ್ರೇಯೋಭಿವೃದ್ಧಿಗೆ ಯಾವ ಮಾನದಂಡ ಸರಿ ಹೊಂದಬಹುದೆಂಬ ಜಿಜ್ಞಾಸೆ ಇಂದಿಗೂ ವಿದ್ವಾಂಸರಲ್ಲಿದೆ. ಬುಡಕಟ್ಟು ವಾಸಿಗಳನ್ನು ಮುಖ್ಯ ವಾಹಿನಿಗೆ ತರಬೇಕು. ಗಿರಿ ಜನರನ್ನು ವಸ್ತುಸಂಗ್ರಹಾಲಯದ ಮಾದರಿಗಳನ್ನಾಗಿ ಮಾಡಬಾರದು ಎಂಬ ಧ್ವನಿ ಒಂದೆಡೆಯಾದರೆ; ಅವರ ಪಾಡಿಗೆ ಅವರನ್ನು ಸ್ವತಂತ್ರರಾಗಿ ಬದುಕಲು ಬಿಡಿ ಎನ್ನುವ ನೀತಿ ಇನ್ನೊಂದು ಕಡೆ ಇದೆ. ಕರ್ನಾಟಕದಲ್ಲಿ ಸಾಮಾನ್ಯವಾಗಿ ಎಲ್ಲಾ ಬುಡಕಟ್ಟು ಜನರು ಬೆಟ್ಟಗುಡ್ಡ, ಕಾಡುಮೇಡು, ನದಿ ಹೊಳೆ ಪ್ರದೇಶ, ಕಣಿವೆಕಂದರ, ಕರಾವಳಿ ತೀರಪ್ರದೇಶ ಮುಂತಾದೆಡೆಗಳಲ್ಲಿ ವಾಸಿಸುತ್ತಾರೆ. ಅವರೊಂದಿಗೆ ಕಲೆತು ಬೆರೆತು ಅವರ ಸ್ಥಿತಿಗತಿಗಳನ್ನು ಕುರಿತು ವಾಸ್ತವಿಕ ಅಧ್ಯಯನ ಮಾಡುವುದು ತುಂಬಾ ಸವಾಲಿನ ಹಾಗೂ ಕಷ್ಟಕರವಾದುದು.ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದಲ್ಲಿ ಅನೇಕ ಬುಡಕಟ್ಟು ಜನಾಂಗಗಳ ಅಧ್ಯಯನವನ್ನು ವಿದೇಶಗಳ ವಿದ್ವಾಂಸರು ಕೈಗೊಂಡಿದ್ದರು.ಆದರೆ ಸ್ವಾತಂತ್ರ್ಯ ನಂತರ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ವಿಶ್ವವಿದ್ಯಾನಿಲಯಗಳು, ಸಂಶೋಧನಾ ಕೇಂದ್ರಗಳು, ಸಾರ್ವಜನಿಕ ಸಂಘ ಸಂಸ್ಥೆಗಳು, ಬುಡಕಟ್ಟು ಸಮಾಜಗಳನ್ನು ಕುರಿತ ಅಧ್ಯಯನಕ್ಕೆ ಹೆಚ್ಚಿನ ಆಸಕ್ತಿ ವಹಿಸಿರುವುದನ್ನು ಮನಗಾಣಬಹುದು.

ಆದಿವಾಸಿ ಸಮುದಾಯಗಳ ಬಗ್ಗೆ ಅನುಭವಾತ್ಮಕ ಹಾಗೂ ಕ್ಷೇತ್ರ ಕಾರ್ಯದ ಮೂಲಕ ಶಾಸ್ತ್ರೀಯವಾಗಿ ಅಧ್ಯಯನವನ್ನು ನಡೆಸಿ ಹಲವಾರು ಗ್ರಂಥಗಳನ್ನು ಪ್ರಕಟಿಸಿದ ಶ್ರೇಯಸ್ಸು ಎಡ್ಗರ್ಡ್ ಥರ್ಸ್ಟನ್, ವೆರಿಯರ್, ಎಲ್ವಿನ್, ಫೇರ್‌ಚೈಲ್ಡ್, ವಾಯಿಸ್ ಮುಂತಾದ ಪಾಶ್ಚಾತ್ಯ ಮಾನವ ಶಾಸ್ತ್ರಜ್ಞರಿಗೆ ಸಲ್ಲುವಂತೆ; ರಂಗಚಾರಿ, ಅನಂತಕೃಷ್ಣ ಅಯ್ಯರ್, ನಂಜುಂಡಯ್ಯ, ಸಕ್ಸೇನಾ, ಘುರ್ಯೆ, ಮಜುಂದಾರ್ ಮುಂತಾದ ದೇಶೀಯ ವಿದ್ವಾಂಶರಿಗೂ ಸಹ ಶ್ರೇಯಸ್ಸು ಸಲ್ಲುತ್ತದೆ. ಈ ಚಾರಿತ್ರಿಕ ಹಿನ್ನೆಲೆಯಲ್ಲಿ ಇದುವರೆಗೂ ಅಧ್ಯಯನ, ಸಂಶೋಧನೆ ಮತ್ತು ದಾಖಲೀಕರಣ ಮುಂತಾದ ಪ್ರಕ್ರಿಯೆಗಳಿಂದ ದೂರವಾಗಿರುವ ಅಥವಾ ನಿರ್ಲಕ್ಷ್ಯಗೊಳಗಾಗಿರುವ ಅಲ್ಪಸಂಖ್ಯಾತ ಬುಡಕಟ್ಟು ಸಮುದಾಯಗಳ ಲ್ಲೊಂದಾದ ದಕ್ಷಿಣ ಕರ್ನಾಟಕದಲ್ಲಿರುವ ಕಣಿಯ ಸಮುದಾಯದವರ ಆರ್ಥಿಕ ಪರಿಸ್ಥಿತಿ, ಸಾಮಾಜಿಕ ಸ್ಥಿತಿಗತಿ ಮತ್ತು ಸಾಂಸ್ಕೃತಿಕ ಸ್ಥಿತ್ಯಂತರವನ್ನು ಕುರಿತು ಶಾಸ್ತ್ರೀಯ ಚೌಕಟ್ಟಿನಲ್ಲಿ ಸೂಕ್ತ ಅಂಕಿ ಅಂಶಗಳೊಂದಿಗೆ ಪರಿಮಣಾತ್ಮಕ ವಿಧಾನದ (ಕ್ವಾಂಟಿಟೇಟಿವ್ ಮೆಥೆಡ್) ಮೂಲಕ ಅಧ್ಯಯನ ಕೈಗೊಳ್ಳುವ ಉದ್ದೇಶವನ್ನು ಹೊಂದಲಾಗಿದೆ.

1.6 ಚಾರಿತ್ರಿಕ ಬರವಣಿಗಳ ಸಮೀಕ್ಷೆ: ಇದುವರೆಗೆ ಕಣಿಯ ಬುಡಕಟ್ಟು ಸಮುದಾಯವನ್ನು ಕುರಿತಂತೆ ರಚಿಸಲಾಗಿರುವ ಸಾಹಿತ್ಯಕ ಮತ್ತು ಚಾರಿತ್ರಿಕ ಗ್ರಂಥಗಳ ವಿಮರ್ಶೆಯು ಅಗತ್ಯವಾಗಿದೆ.

1. ತಗಡೂರು ರಾಮಚಂದ್ರ ರಾಯರ (1925), ಕಣಿಯರ ವರ್ಣ ವ್ಯವಸ್ಥೆ, ಶ್ರೀಕೃಷ್ಣರಾಜ ವಾಣಿವಿಲಾಸ ಪ್ರೆಸ್, ಮೈಸೂರು: ಈ ಗ್ರಂಥದಲ್ಲಿ ಸ್ವಾತಂತ್ರ ಹೋರಾಟದ ಜೊತೆ ಜೊತೆಗೆ ಸಾಮಾಜಿಕ ಶೋಷಣೆಯ ವಿರುದ್ಧ ಧ್ವನಿ ಎತ್ತಿದ ರಾಷ್ಟ್ರೀಯವಾದಿ ಚಿಂತಕರಾದ ತಗಡೂರು ರಾಮಚಂದ್ರರಾಯರು ಕಣಿಯರನ್ನು ತಿರುಮಕೂಡಲು ನರಸೀಪುರದ ಶ್ರೀ ಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಪ್ರವೇಶಕ್ಕೆ ಬಹಿಷ್ಕಾರ ಹಾಕಿದ ಘಟನೆಯ (ಅಸ್ಪೃಶ್ಯತೆ ಅಚರಣೆ) ವಿರುದ್ಧ ಉಗ್ರವಾಗಿ ಹೋರಾಟವನ್ನು ಮಾಡಿದರು. ಕಣಿಯರಿಗೆ ಸಾಮಾಜಿಕವಾಗಿ ಎದುರಾದಂತಹ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರಕ್ಕೆ ಪತ್ರ ಬರೆದು ತೀವ್ರ ಪ್ರತಿಭಟನೆಯೊಂದಿಗೆ ಹೋರಾಟವನ್ನು ಆರಂಭಿಸಿದರು. ರಾಮಚಂದ್ರರಾಯರು ತಾವು ನೋಡಿದ ಕಣಿಯ ಸಮುದಾಯದವರ ಸಮಸ್ಯೆಗಳನ್ನು ಪ್ರಧಾನವಾಗಿ ಅವರು ಸಾಮಾಜಿಕವಾಗಿ ಅನುಭವಿಸುತ್ತಿದ್ದ ಅಸ್ಪೃಶ್ಯತಾ ಆಚರಣೆಯನ್ನು ಈ ಕೃತಿಯಲ್ಲಿ ಸ್ಥೂಲವಾಗಿ ಚರ್ಚಿಸಿದ್ದಾರೆ.

2.ನಂಜುಂಡಯ್ಯ.ಎಚ್.ವಿ ಮತ್ತು ಎಲ್.ಕೆ.ಅನಂತಕೃಷ್ಣ ಅಯ್ಯರ್(1930)'Mysore tribes and Caste' ಎಂಬ ಗ್ರಂಥದಲ್ಲಿ ದಕ್ಷಿಣ ಭಾರತದಲ್ಲಿ ಕಂಡುಬರುವ ಸೋಲಿಗರಲ್ಲಿ ಉರಾಳಿ ಸೋಲಿಗ, ಮಲೈ ಸೋಲಿಗ, ಕಾಡು ಸೋಲಿಗ, ಊರ ಬುಟ್ಟಿ ಸೋಲಿಗ ಎಂಬ ನಾಲ್ಕು ಪಂಗಡಗಳಿವೆ ಎಂದು ಹೇಳಿದ್ದಾರೆ. ಊರಾಳಿ ಸೋಲಿಗರು ಚಾಮರಾಜನಗರ ಮತ್ತು ಸತ್ಯಮಂಗಲದಲ್ಲಿ ದಟ್ಟವಾಗಿ ಕಂಡುಬರುತ್ತಾರೆ. ಮಲೈ ಸೋಲಿಗರು ಮತ್ತು ಕಾಡು ಸೋಲಿಗರು ಬಿಳಿಗಿರಿರಂಗನಬೆಟ್ಟ ಮತ್ತು ಮಹದೇಶ್ವರ ಬೆಟ್ಟದ ಸುತ್ತಮುತ್ತಲಿನ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ ಹಾಗೂ ಊರಬುಟ್ಟಿ ಸೋಲಿಗರು ಹೆಗ್ಗಡದೇವನ ಕೋಟೆ ಮತ್ತು ಕಾಕನಕೋಟೆ ಅರಣ್ಯ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ದೇವ ಸೋಲಿಗ ಎಂಬ ಸೋಲಿಗರು ಕಂಡು ಬರುತ್ತಾರೆಂದು ಸಹ ತಿಳಿಸಲಾಗಿದೆ.

3. ಅನಂತ ಕೃಷ್ಣ ಐಯ್ಯರ್ ಎಲ್.ಕೆ (1948), ದಿ ಕೂರ್ಗ್ ಟ್ರೈಬಲ್ ಅಂಡ್ ಕ್ಯಾಸ್ಟ್ಸ್, ಮದ್ರಾಸ್ ಈ ಕೃತಿಯು ಕೊಡಗು ಪ್ರಾಂತ್ಯದ ಸಾಮಾಜಿಕ ವ್ಯವಸ್ಥೆಗೆ ಸಂಬಂಧಿಸಿದಂತೆ ಅಲ್ಲಿನ ಮೂಲ ನಿವಾಸಿ ಬುಡಕಟ್ಟು ವರ್ಗಗಳಾದ ಕಾಡುಕುರುಬ, ಜೇನು ಕುರುಬ, ಬೆಟ್ಟ ಕುರುಬ, ಮಲೈ ಕುಡಿಯ, ಕಣಿಯನ್ ಮುಂತಾದ ಬುಡಕಟ್ಟು ಜನಾಂಗಗಳ ಜೀವನದ ಬಗೆಗೆ ಬೆಳಕು ಚೆಲ್ಲುತ್ತದೆ. ಈ ಕೃತಿಯು ಸಹ ಪ್ರಸ್ತುತ ಅಧ್ಯಯನಕ್ಕೆ ಪೂರಕ ಮಾಹಿತಿಗಳನ್ನು ಒದಗಿಸುತ್ತದೆ.

4. ಪಿ.ಪದ್ಮನಾಭ, 'ಎತ್ನೋಗ್ರಾಫಿಕ್ ನೋಟ್ಸ್ ಆನ್ ಷೆಡ್ಯೂಲ್ಡ್ ಕ್ಯಾಸ್ಟ್ ಅಂಡ್ ಷೆಡ್ಯೂಲ್ಡ್ ಟ್ರೈಬ್',(1961)

ಸೆನ್ಸ್‌ಸ್ ಆಫ್ ಇಂಡಿಯಾ. ಭಾರತ ಸರ್ಕಾರ ಮುದ್ರಣಾಲಯ, ಕೊಯಮ್ಮತ್ತೂರು

ಶ್ರೀ.ಪಿ.ಪದ್ಮನಾಭ ರವರ ಸಂಪಾದಕತ್ವದಲ್ಲಿ ಸಿದ್ಧಪಡಿಸಲಾದ ವರದಿಯಲ್ಲಿ ಸ್ವಾತಂತ್ರ್ಯ ನಂತರದ ಭಾಷಾವಾರು ರಾಜ್ಯಗಳು ಪುನರ್ವಿಂಗಡಣೆಯಾದಾಗ ಈ ಹಿಂದಿನ ಮದ್ರಾಸ್ ರಾಜ್ಯದ ಕೊಯಂಬತ್ತೂರು ಜಿಲ್ಲೆಗೆ ಸೇರಿದ್ದ ಕೊಳ್ಳೇಗಾಲ ತಾಲ್ಲೂಕಿನಲ್ಲಿ ನೆಲೆಯಾಗಿರುವ ಕಣಿಯನ್ ಸಮುದಾಯದವರು ಆಂಧ್ರಪ್ರದೇಶದಿಂದ ಕರ್ನಾಟಕಕ್ಕೆ ವಲಸೆ ಬಂದವರೆಂದು ತಿಳಿಸಲಾಗಿದೆ. ಈ ಸಮುದಾಯದ ಸಾಮಾಜಿಕ ಹಿನ್ನೆಲೆ, ಪದ ಹುಟ್ಟು ಮತ್ತು ಗುರುತಿಸುವಿಕೆಯನ್ನು ಸಹ ತಿಳಿಸಲಾಗಿದೆ. ಜ್ಯೋತಿಷ್ಯ ನುಡಿಯುವ ಕಸುಬನ್ನು ಸಂಪ್ರದಾಯಿಕವಾಗಿ ಅನುಸರಿಸಿಕೊಂಡು ಬದುಕುತ್ತಿರುವ ಈ ಜನಾಂಗವನ್ನು ಕಣಿಯ, ಕಣಿಯರು, ಕಣಿಸನ್, ಕಣ್ಯನ್, ಕಣಿಯನ್ ಎಂಬ ಪರ್ಯಾಯ ಪದಗಳಿಂದ ಗುರುತಿಸುತ್ತಿರುವುದನ್ನು ಸಹ ಸೂಚಿಸಿದ್ದಾರೆ. ಕಣಿಯನ್ ಜನರ ಜೀವನಶೈಲಿ, ಆಹಾರ ಪದ್ಧತಿ, ಉಡುಗೆ ತೊಡುಗೆ, ಸಾಮಾಜಿಕ ಹಾಗೂ ಆರ್ಥಿಕ ಜೀವನ, ಸಮುದಾಯದೊಳಗಿನ ಸಂಬಂಧಗಳು, ಧಾರ್ಮಿಕ ಆಚರಣೆಗಳು ಹೀಗೆ ಹಲವಾರು ಅಂಶಗಳನ್ನು ಸೂಕ್ಷ್ಮವಾಗಿ ತಿಳಿಸಲಾಗಿದೆ.

5. ಹರೀಶ್ ಪಿ.ಎನ್. (1993), ಯರವರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಈ ಗ್ರಂಥವು ಯರವ ಎನ್ನುವ ಪದದ ಉಗಮ ಮತ್ತು ಯರವರ ಕುರಿತ ಐತಿಹ್ಯಗಳು, ಅವರ ವಾಸದ ನೆಲೆಗಳು, ಭೌಗೋಳಿಕ ಹಿನ್ನೆಲೆ, ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ, ಆಸ್ತಿಯ ಉತ್ತರಾಧಿಕಾರ, ಕುಲದೇವತಾ ಕುರುಹುಗಳು, ಯರವ ಸಮುದಾಯದ ಮುಂದಾಳುಗಳು, ಕುಲಪಂಚಾಯ್ತಿ, ಕಾನೂನು ಆಚರಣೆಗಳು, ಮದುವೆ, ವಿಚ್ಛೇದನ, ಜನನ ಮರಣ, ಸೂತಕ, ನಾಮಕರಣ, ಋತುಮತಿಯ ಆಚರಣೆ ಹೀಗೆ ಎಲ್ಲಾ ವಿಚಾರಗಳನ್ನು ಒಳಗೊಂಡಿದೆ. ಈ ಗ್ರಂಥವು ಕೂಡ ಪ್ರಸ್ತುತ ಸಂಶೋಧನೆಗೆ ಉಪಯುಕ್ತ ಮಾಹಿತಿಗಳನ್ನು ಒದಗಿಸಿದೆ.

6. ಡಾ. ಅಂಬಳಿಕೆ ಹಿರಿಯಣ್ಣ (1994), ಬುಡಕಟ್ಟು ಜನರ ಬದಲಾಗುತ್ತಿರುವ ಆರ್ಥಿಕ ಜೀವನ ಜಾನಪದ ಕೆಲವು ಅಧ್ಯಯನಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

ಡಾ.ಅಂಬಳಿಕೆ ಹಿರಿಯಣ್ಣ, ಇವರು ತಮ್ಮ ಗ್ರಂಥದಲ್ಲಿ ಬುಡಕಟ್ಟು ಜನರ ಬಗ್ಗೆ ಸಾಕಷ್ಟು ವಿವರಣೆಗಳನ್ನು ನೀಡಿದ್ದು. ಬದಲಾಗುತ್ತಿರುವ ಇಂದಿನ ಯುಗದಲ್ಲಿ ಬಡುಕಟ್ಟು ಜನರು ಯಾವ ರೀತಿಯ ಜೀವನ ಕ್ರಮವನ್ನು ಹೊಂದಿದ್ದಾರೆ. ಅವರ ಸಾಮಾಜಿಕ ವ್ಯವಸ್ಥೆ, ಆರ್ಥಿಕ ಜೀವನಕ್ಕೆ ಸಂಬಂಧಿಸಿದ ಬದಲಾವಣೆಗಳನ್ನು ವಿವರಿಸಿದ್ದು, ಅವರ ಜಾನಪದ ಸಂಸ್ಕೃತಿಯ ಬಗ್ಗೆ ವಿಶೇಷ

ಅಧ್ಯಯನವನ್ನು ನಡೆಸಿದ್ದಾರೆ. ಈ ಗ್ರಂಥವು ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಒದಗಿಸುತ್ತದೆ.

7. ಪ್ರೊ ಹೆಚ್.ಜೆ.ಲಕ್ಕಪ್ಪಗೌಡ (1998), ಕರ್ನಾಟಕ ಬುಡಕಟ್ಟುಗಳು (ಸಂಪುಟ–1), ಬೆಂಗಳೂರು

ಈ ಗ್ರಂಥದಲ್ಲಿ ಕರ್ನಾಟಕದ ವಿವಿಧ ಬುಡಕಟ್ಟು ಜನಾಂಗಗಳಾದ ಜೇನು ಕುರುಬ, ಕಾಡು ಕುರುಬ, ಹಕ್ಕಿ ಪಿಕ್ಕಿ, ಯರವ, ಸೋಲಿಗ, ಕೊರಗ, ಕೊರಮ, ತೋಡ ಸಮುದಾಯಗಳ ಬಗೆಗಿನ ಸಾಮಾಜಿಕ ಹಾಗೂ ಆರ್ಥಿಕ ಜೀವನದ ವಿಚಾರಧಾರೆಗಳ ಮೇಲೆ ಸಮಗ್ರವಾದ ಬೆಳಕನ್ನು ಚೆಲ್ಲಲಾಗಿದೆ. ಈ ಸಂಪುಟದಲ್ಲಿರುವ ಮಲ್ಲಿಕಾರ್ಜುನ ಅವರ ಯರವರು ಎಂಬ ಲೇಖನವು ಪ್ರಸ್ತುತ ಅಧ್ಯಯನಕ್ಕೆ ಸಾಕಷ್ಟು ಉಪಯುಕ್ತ ಮಾಹಿತಿಗಳನ್ನು ಒದಗಿಸುತ್ತದೆ. ಯರವ ಸಮುದಾಯದ ಜನರ ದಿನಚರಿ, ಮನರಂಜನೆ, ಮದುವೆ, ವಿಚ್ಛೇದನ, ಜನಸಂಖ್ಯೆ, ಸಾಕ್ಷರತೆ, ಜಾನಪದ, ಸಾಹಿತ್ಯ ಭಾಷೆ ಹೀಗೆ ಹಲವಾರು ಅಂಶಗಳನ್ನು ವಿವರಿಸಲಾಗಿದೆ.

8. ಎ.ಎಸ್.ಪ್ರಭಾಕರರವರು (2000), ಕರ್ನಾಟಕ ಬುಡಕಟ್ಟು ಅಧ್ಯಯನ, ಹಂಪಿ.

ಎ.ಎಸ್. ಪ್ರಭಾಕರ ರವರು ಕರ್ನಾಟಕ ಬುಡಕಟ್ಟು ಜನರ ಬಗ್ಗೆ ಅಧ್ಯಯವನ್ನು ನಡೆಸಿದ್ದು, ಬುಡಕಟ್ಟು ಜನಾಂಗಗಳ ಸಾಮಾಜಿಕ ಸಂಪ್ರದಾಯಗಳು, ಸಂಸ್ಕೃತಿ, ಜೀವನದ ವಿವಿಧ ಹಂತಗಳಲ್ಲಿ ಅವರು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳು ಸರ್ಕಾರದ ಅಭಿವೃದ್ಧಿ ಯೋಜನೆಗಳು, ಸಾರ್ವಜನಿಕ ನೀತಿಗಳು ಮುಂತಾದವುಗಳ ವಿವರಣೆಯನ್ನು ನೀಡಿದ್ದು, ಪ್ರಸ್ತುತ ವಿಷಯಕ್ಕೆ ಮಾಹಿತಿಯನ್ನು ಒದಗಿಸುತ್ತದೆ.

9. ಮೈತ್ರಿ ಕೆ.ಎಂ (2002), ಬುಡಕಟ್ಟು ಕುಲಕಸುಬುಗಳು, ಹಂಪಿ

ಈ ಗ್ರಂಥವು 49 ಬುಡಕಟ್ಟು ಸಮುದಾಯಗಳ ಪಾರಂಪರಿಕ ಉದ್ಯೋಗ ಮತ್ತು ಈ ಬುಡಕಟ್ಟುಗಳು ವಿವಿಧ ಸಂಘ ಸಂಸ್ಥೆಗಳ ಮೂಲಕ ತರಬೇತಿ ಪಡೆದುಕೊಂಡು ಮಾಡುತ್ತಿರುವ ಉದ್ಯೋಗಗಳ ಕುರಿತು ಬೆಳಕು ಚೆಲ್ಲುತ್ತದೆ. ಬುಡಕಟ್ಟು ಸಮುದಾಯಗಳು ತಮ್ಮ ಆಹಾರಕ್ಕಾಗಿ ಗೆಡ್ಡೆಗೆಣಸು ತಿನ್ನುವುದು, ಬೇಟೆಯಾಡುವುದರ ಬಗ್ಗೆ ಮಾಹಿತಿ ನೀಡುತ್ತದೆ. ಬುಡಕಟ್ಟು ಸಮುದಾಯಗಳು ಬಹುತೇಕ ಜೀವನೋಪಾಯಕ್ಕಾಗಿ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿರುವ ಆನೇಕ ವಿಚಾರಗಳ ಮೇಲೆ ಈ ಪುಸ್ತಕವು ಬೆಳಕು ಚೆಲ್ಲುತ್ತದೆ. ಎರವರ ಉಪ ಪಂಗಡಗಳು ಮತ್ತು ಅವರ ಶಾರೀರಿಕ ಲಕ್ಷಣಗಳು, ಕುಲ ಮತ್ತು ಕುಲ ಸಂಬಂಧಿ ದೈವಗಳು ಅವರ ವೈವಾಹಿಕ ಪದ್ಧತಿಗಳು ವಾಸದ ನೆಲೆಗಳು ಮುಂತಾದವುಗಳನ್ನು ಕುರಿತು ಅಧ್ಯಯನಕ್ಕೆ ಅವಶ್ಯಕ ಮಾಹಿತಿಗಳನ್ನು ಒದಗಿಸಿಕೊಟ್ಟಿರುವ ಗ್ರಂಥಗಳಲ್ಲಿ ಒಂದಾಗಿದೆ. ಈ ಗ್ರಂಥವು ಸಹ ಪ್ರಸ್ತುತ ಅಧ್ಯಯನಕ್ಕೆ ಪೂರಕ ಮಾಹಿತಿಯನ್ನು ಒದಗಿಸಿದೆ.

10. ಡಾ. ಎಂ.ಸುಮಿತ್ರ (2002), ಕಣಿಯರ ಸಂಸ್ಕೃತಿ, ಬೆಂಗಳೂರು.

ಈ ಕೃತಿಯನ್ನು ಲೇಖಕರು ಒಟ್ಟು 6 ಅಧ್ಯಾಯಗಳಾಗಿ ರೂಪಿಸಿದ್ದಾರೆ. 1) ಪ್ರಸ್ತಾಪನೆ, 2) ಕಣಿಯ ಜನಾಂಗದ ಪರಿಚಯ, 3) ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ, 4) ತಗಡೂರು ರಾಮಚಂದ್ರರಾಯರು 5) ಕಣಿಯರ ಸಂಪ್ರದಾಯಿಕ 8 ವೃತ್ತಿಗಳು, 6) ಕಣಿಯರ ನಂಬಿಕೆ ಮತ್ತು ಸಂಪ್ರದಾಯ ಎಂಬ ಅಂಶಗಳ ಮೂಲಕ ಕಣಿಯ ಜನಾಂಗವು ಪ್ರಾಚೀನ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ವಿಶಿಷ್ಟ ಜನಾಂಗ, ಕೇರಳ ಮತ್ತು ತಮಿಳುನಾಡಿನಲ್ಲಿ ಕಂಡುಬರುವ ಕಣಿಯನ್ ಜನಾಂಗದ ಮೂಲ, ಇವರು ಕರ್ನಾಟಕಕ್ಕೆ ವಲಸೆ ಬಂದು ಇಲ್ಲಿಯ ಅನೇಕ ಹಳ್ಳಿಗಳಲ್ಲಿ ನೆಲೆಸಿರುವಿಕೆ, ಕಣಿಯನ್ ಜನಾಂಗವು ಭವಿಷ್ಯ ಹೇಳುವುದು, ನಾಟಿ ವೈದ್ಯ ಮಾಡುವುದು, ದೆವ್ವ ಬಿಡಿಸುವುದು, ಮಾಟಮಂತ್ರಯಂತ್ರ ಮಾಡುವುದು, ಮೊದಲಾದ ವಿಭಿನ್ನ ಹಾಗೂ ವಿಶಿಷ್ಟ ಸಂಪ್ರದಾಯಿಕ ವೃತ್ತಿಗಳು ಹೊಂದಿದೆ. ಕಣಿಯನ್ ಸಮುದಾಯದ ಏಳಿಗೆಗಾಗಿ ಶ್ರಮಿಸಿದ ತಗಡೂರು ರಾಮಚಂದ್ರರಾಯರ ಬಗ್ಗೆ ವಿಶೇಷ ಮಾಹಿತಿಯನ್ನು ನೀಡಲಾಗಿದೆ. ಇವರು 1925 ರಲ್ಲಿ 'ಕಣಿಯರ ವರ್ಣ ವ್ಯವಸ್ಥೆ' ಎಂಬ ಸಣ್ಣ ಕೃತಿಯನ್ನು ಸಹ ಪ್ರಕಟಣೆ ಮಾಡಿ ಅದರಲ್ಲಿ ಕಣಿಯರ ಸಾಮಾಜಿಕ ಸಮಸ್ಯೆಗಳನ್ನು ಚರ್ಚಿಸಿದ್ದಾರೆ. ಈ ಮೇಲ್ಕಂಡ ಎಲ್ಲಾ ಮಾಹಿತಿಗಳನ್ನು ಆಕರ ಗ್ರಂಥ ವಿಸ್ತೃತವಾಗಿ ನೀಡುವುದರಿಂದ ಈ ಕೃತಿಯು ಸಹ ಪ್ರಸ್ತುತ ಸಂಶೋಧನೆಗೆ ಅಮೂಲ್ಯ ಆಕರ ಗ್ರಂಥವಾಗಿದೆ.

11. ಡಾ. ಹೆಚ್.ಕೆ ಭಟ್ಟ ಮತ್ತು ಆರ್.ಚಂದ್ರಶೇಖರ್ (2003), ಕರ್ನಾಟಕದ ಕಣಿಯರು, ಡಾ.ಬಿ.ಆರ್ ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಬೆಂಗಳೂರು

ಕರ್ನಾಟಕದ ಕಣಿಯರು ಈ ಕೃತಿಯು 1) ಕಣಿಯ ಜನಾಂಗದ ಹಿನ್ನೆಲೆ, 2) ಕರ್ನಾಟಕದ ಕಣಿಯರು ಮತ್ತು 3) ಉಪಸಂಹಾರ ಮತ್ತು ಸಲಹೆಗಳು ಎಂಬ ಮೂರು ಅಧ್ಯಾಯಗಳನ್ನು ಹೊಂದಿದೆ. ಕರ್ನಾಟಕದಲ್ಲಿ ಹಲವಾರು ಧರ್ಮ, ಜಾತಿ, ಸಂಸ್ಕೃತಿ ಮತ್ತು ಪರಂಪರೆಯನ್ನು ಅನುಸರಿಸುವ ಜನರಿದ್ದಾರೆ. ಕೊಳ್ಳೇಗಾಲ ತಾಲ್ಲೂಕಿನಲ್ಲಿ ಮಾತ್ರ ಕಣಿಯನ್ ಬುಡಕಟ್ಟು ಅಧಿಕ ಸಂಖ್ಯೆಯಲ್ಲಿ ನೆಲೆಸಿರುವುದನ್ನು ನೋಡಬಹುದು. ಪ್ರಾದೇಶಿಕ ಮಿತಿಗೆ ಒಳಪಟ್ಟು ಬದುಕುತ್ತಿರುವ ಈ ಬುಡಕಟ್ಟನ್ನು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸಲಾಗಿದೆ ಹಾಗೂ ಸಂವಿಧಾನಾತ್ಮಕ ಸ್ಥಾನಮಾನ ಪಡೆದು ಸರ್ಕಾರದ ಸವಲತ್ತುಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಆದರೆ ಕಣಿಯನ್ ಬುಡಕಟ್ಟು ಜಾತಿಯ ಪರ್ಯಾಯ ಪದಗಳಾದ ಕಣಿಯ, ಕಣಿಯರು, ಕಣಿಯರ್, ಕಣಿಸನ್, ಕಣ್ಯನ್ ಎಂಬ ವಿವಿಧ ಹೆಸರುಗಳಿಂದ ಕರೆಯುವವರನ್ನು 2ಎ ವರ್ಗಗಳ ಪಟ್ಟಿಗೆ ಸೇರಿಸಿದೆ. ಆದುದರಿಂದ ಈ ಸಮುದಾಯದೊಳಗೆ ಅನಗತ್ಯ ಗೊಂದಲ, ವಿವಾದಗಳು ಸಹ ಇದೆ. ಈ ಮೇಲಿನ ಪದಗಳಿಂದ

ಕರೆಯುವ ಜನರನ್ನು ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸಬೇಕು ಎಂಬ ಸಮಸ್ಯೆಯನ್ನು ಮುಂದಿಟ್ಟು ಕೊಂಡು ಸರ್ಕಾರದ ಸೌಲಭ್ಯಗಳನ್ನು ಪಡೆಯುವಲ್ಲಿ ಕಣಿಯರು ವಿಫಲರಾಗುತ್ತಿದ್ದಾರೆ. ಇದರಿಂದ ಉಪಸಮುದಾಯಗಳ ನಡುವೆ ವೈಷಮ್ಯಗಳು ಬೆಳೆಯ ತೊಡಗಿದೆ, ಆದಗ್ಯೂ ಮೀಸಲಾತಿಯನ್ನು ಬಳಸಿಕೊಂಡು ಬದುಕನ್ನು ಉಜ್ವಲಗೊಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂಬ ಅಂಶವನ್ನು ತಿಳಿಸುತ್ತದೆ. ಈ ಅಧ್ಯಯನವು ಮಾನವ ಶಾಸ್ತ್ರೀಯ ವಿಧಾನದಿಂದ ನಡೆಸಲಾಗಿದ್ದು, ಆನೇಕ ಸಮಸ್ಯೆಗಳ ನಡುವೆಯೇ ಬದುಕನ್ನು ಕಟ್ಟಿಕೊಂಡಿರುವ ಕಣಿಯನ್ ಸಮುದಾಯದ ಸಂಸ್ಕೃತಿ, ಆಚರಣೆ, ಜನನ, ಮರಣ, ಕುಲ, ಗೋತ್ರ ಮುಂತಾದ ಕಣಿಯರ ಸಾಮಾಜಿಕ ಬದುಕನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

12. ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯು ಕೈಗೊಂಡಿರುವ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿರುವ ಕಣಿಯನ್ ಬುಡಕಟ್ಟು ಸಮುದಾಯದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸ್ಥಿತಿಗತಿಗಳು ಹಾಗೂ ಕುಲವರ್ಣನಾ ಶಾಸ್ತ್ರ ಅಧ್ಯಯನ ವರದಿ (2005).

ಮೈಸೂರು ನಗರದಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯು ಕೈಗೊಂಡಿರುವ ಈ ಕುಲ ವರ್ಣನಾಶಾಸ್ತ್ರ ಅಧ್ಯಯನ ವರದಿಯಲ್ಲಿ ಒಟ್ಟು 8 ಅಧ್ಯಾಯಗಳನ್ನು ರೂಪಿಸಲಾಗಿದೆ.ಅಧ್ಯಾಯ.1 ರಲ್ಲಿ ಬುಡಕಟ್ಟು ಸಮುದಾಯದ ಅರ್ಥ ಮತ್ತು ವ್ಯಾಖ್ಯೆಗಳು, ಅಧ್ಯಾಯ.2 ರಲ್ಲಿ ಸಂಶೋಧನಾ ವಿಧಾನಗಳು, ಅಧ್ಯಾಯ.3 ರಲ್ಲಿ ಕಣಿಯನ್ ಬುಡಕಟ್ಟು ಸಮುದಾಯದ ಮೂಲ ಮತ್ತು ಇತಿಹಾಸ, ಅಧ್ಯಾಯ 4.ರಲ್ಲಿ ಸಾಮಾಜಿಕ ಸ್ಥಿತಿಗತಿ, ಅಧ್ಯಾಯ 5ರಲ್ಲಿ ಧಾರ್ಮಿಕ ಆಚರಣೆಗಳು ಮತ್ತು ಹಬ್ಬಗಳು, ಅಧ್ಯಾಯ 6 ರಲ್ಲಿ ಆರ್ಥಿಕ ಸ್ಥಿತಿಗತಿಗಳು ಅಧ್ಯಾಯ.7ರಲ್ಲಿ ಶೈಕ್ಷಣಿಕ ಸ್ಥಿತಿಗತಿಗಳು, ಅಧ್ಯಾಯ.8ರಲ್ಲಿ ಆರೋಗ್ಯದ ಸ್ಥಿತಿಗತಿಗಳು, ಎಂಬ ಘಟಕಗಳನ್ನು ರೂಪಿಸಿಕೊಂಡು ಕರ್ನಾಟಕದಲ್ಲಿರುವ ಬುಡಕಟ್ಟುಗಳ ಬಗ್ಗೆ ಚರ್ಚಿಸಿ ತದನಂತರ ಪ್ರಾದೇಶಿಕ ಮಿತಿಗೆ ಒಳಪಟ್ಟು ಪ್ರಸ್ತುತ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಮಾತ್ರ ಕಾಣಸಿಗುತ್ತಿರುವ ಸಮುದಾಯವೇ ನಿಜವಾದ ಕಣಿಯನ್ ಬುಡಕಟ್ಟಾಗಿದೆ. ಕವಡೆಗಳನ್ನು ಬಳಸಿ ಜೋತಿಷ್ಯ ನುಡಿಯುವ ಕುಲಕಸುಬನ್ನು ಬದುಕಾಗಿಸಿಕೊಂಡಿರುವ ಕಣಿಯನ್ ಜನಾಂಗದ ಬದುಕನ್ನು ಚಿತ್ರಿಸಿದ್ದಾರೆ.ಕಣಿಯನ್ ಜನಾಂಗವು ತಮ್ಮ ಮೂಲವನ್ನು ಕಥೆಗಳ ಮೂಲಕ ಕಟ್ಟಿಕೊಂಡಿದ್ದಾರೆ.ಅದರ ಮುಖೇನ ತಮ್ಮ ಇರುವಿಕೆಯನ್ನು ಗುರುತಿಸುತ್ತಿದೆ.ಕಣಿಯನ್ ಪದದ ನಿಷ್ಪತ್ತಿ, ಕಣಿಯನ್ ಜನಾಂಗದ ಇತಿಹಾಸ, ವಲಸೆ ಜೀವನ, ಭಾಷೆ, ಭೌಗೋಳಿಕ ಪ್ರದೇಶದ ಹಿನ್ನೆಲೆ, ಜನಸಂಖ್ಯೆ, ಕುಲಪಂಚಾಯ್ತಿ, ಕೌಟುಂಬಿಕ ವ್ಯವಸ್ಥೆ, ಶರೀರಿಕ ಲಕ್ಷಣಗಳು, ವೇಶಭೂಷಣ ಇತ್ಯಾದಿ ಸಾಮಾಜಿಕ ಜೀವನದ ವಿವಿಧ ಅಂಶಗಳ ಜೊತೆಗೆ ಧಾರ್ಮಿಕ ಆಚರಣೆಗಳು, ಜಾತ್ರೆಗಳು, ಅವುಗಳ ವೈಶಿಷ್ಟತೆ ಮುಂತಾದ ಎಲ್ಲಾ ವಿವರಗಳನ್ನು ಈ

ವರದಿಯು ಎಳೆಎಳೆಯಾಗಿ ಬಿಡಿಸಿ ವಿವರಿಸುತ್ತದೆ. ಈ ವರದಿಯು ಪ್ರಸ್ತುತ ಸಂಶೋಧನೆಗೆ ಉಪಯುಕ್ತ ಮಾಹಿತಿಗಳನ್ನು ಒದಗಿಸಿದೆ.

13 ಕೈಪಿಡಿ(2018), ಶ್ರೀ ವೈಷ್ಣವ ಧರ್ಮದಲ್ಲಿ ಕಣಿಯರು, ಶ್ರೀ ರಾಮಾನುಜಸೇವಾ ಸಮಿತಿ, ಮೈಸೂರು.

ಈ ಕೈಪಿಡಿಯಲ್ಲಿ ವೈಷ್ಣವ ಧರ್ಮವನ್ನು ಪರಿಪಾಲಿಸುತ್ತಿರುವ ಕಣಿಯರು ಜನಾಂಗದ ಕಟ್ಟುನಿಟ್ಟಿನ ಧಾರ್ಮಿಕ ಆಚರಣೆಗಳನ್ನು ತಿಳಿಸಲಾಗಿದೆ. ಕಣಿಯರು ಶ್ರೀವೈಷ್ಣವ ಸಂಪ್ರದಾಯಸ್ಥರು ಮತ್ತು ಶ್ರೀ.ರಾಮಾನುಜಾಚಾರ್ಯರ ಪ್ರಭಾವದಿಂದ ವೈಷ್ಣವ ಧರ್ಮವನ್ನು ಸಾವಿರ ವರ್ಷಗಳಿಂದ ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರುತ್ತಿದ್ದಾರೆ ಎಂಬ ಮಾಹಿತಿಗಳನ್ನು ನೀಡುತ್ತದೆ. ಮಾನವನ ಉದಯದಲ್ಲಿ ಮೂಡಿಸಿರುವಂತೆ ಕಣಿಯರು ಪ್ರಮುಖವಾಗಿ ಒಂದು ಉತ್ಕೃಷ್ಟವಾದ ಸಾಕಾದ್ವೀಪದ ಪುರಾತನ ಸಮುದಾಯವಾಗಿದ್ದು. ತದನಂತರ ವಲಸೆಗೊಂಡು ಭಾರತದ ಹಲವು ಭಾಗಗಳಲ್ಲಿ ನೆಲೆಸಿದ್ದಾರೆ ಎಂಬ ಮಾಹಿತಿಗಳನ್ನು ನೀಡುತ್ತದೆ ಆದುದರಿಂದ ಈ ಪುಸ್ತಕವು ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿದೆ.

14. ರೇವಣ್ಣ.ಎಲ್ (2019), ಗಿರಿಜನರ ಆಚರಣೆಗಳು ನೆಲೆ ಕಣಿಯನ್ ಜನಾಂಗದ ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಈ ಕೃತಿಯಲ್ಲಿ 8 ಅಧ್ಯಾಯಗಳಿವೆ. 1.ಮೊದಲನೆಯ ಅಧ್ಯಾಯವು ಅಧ್ಯಯನದ ತಾತ್ವಿಕ ಒಳವಿನ್ಯಾಸಗಳು, 2.ಅಧ್ಯಾಯವು ಕಣಿಯನ್ ಜನರ ಜೀವನ ವಿಧಾನ, 3.ಅಧ್ಯಾಯವು ಕಣಿಯನ್ ಜನಾಂಗದ ಭೌಗೋಳಿಕ ವಿನ್ಯಾಸ, 4.ಅಧ್ಯಾಯವು ಕಣಿಯನ್ ಜನರ ಸಂಪ್ರದಾಯಿಕ ಆಚರಣೆಗಳು, 5.ಅಧ್ಯಾಯವು ಕಣಿಯನ್ ಜನಾಂಗದ ಕಣಿಶಾಸ್ತ್ರೀಯತೆ, 6.ಅಧ್ಯಾಯವು ಕಣಿಯನ್ ಜನಪದರ ವೈದ್ಯಪದ್ಧತಿ, 7.ಅಧ್ಯಾಯವು ಕಣಿಯನ್ ಜನಾಂಗದ ಧಾರ್ಮಿಕ ಆಚರಣೆಗಳ ನೆಲೆಗಟ್ಟು, 8.ಅಧ್ಯಾಯವು ಕಣಿಯನ್ ಜನರ ನಾಳಿನ ಸಮಸ್ಯೆಗಳು ಎಂಬ ಅಧ್ಯಾಯಗಳನ್ನು ಒಳಗೊಂಡಿದೆ. ಈ ಕೃತಿಯಲ್ಲಿ ಕಣಿಯನ್ ಜನಾಂಗದವರು ಕರ್ನಾಟಕದ ಯಾವ ಗ್ರಾಮಗಳಲ್ಲಿ ನೆಲೆಸಿದ್ದಾರೆ ಅವರ ಸಂಸ್ಕೃತಿ, ಆಚಾರ, ವಿಚಾರ, ಆಹಾರ ಪದ್ಧತಿ, ಜ್ಯೋತಿಷ್ಯ, ಮಾಟಮಂತ್ರ ಮಾಡುವುದು ಹಾಗೂ ನಾಟಿ ವೈದ್ಯ ಚಿಕಿತ್ಸಾ ಪದ್ಧತಿಯ ಉಪಚಾರ ನೀಡುವುದು ಮುಂತಾದ ವಿಚಾರಗಳನ್ನು ತಿಳಿಸುತ್ತದೆ. ಈ ಕೃತಿಯು ಸಹ ಪ್ರಸ್ತುತ ಸಂಶೋಧನೆಗೆ ಅತ್ಯಂತ ಪೂರಕ ಮಾಹಿತಿಗಳನ್ನು ನೀಡುತ್ತದೆ.

1.7 ಸಂಶೋಧನೆಯಲ್ಲಿ ಅನುಸರಿಸಲಾಗಿರುವ ಸಂಶೋಧನಾ ವಿಧಾನ: ಇತಿಹಾಸ ಸಂಶೋಧನೆಯಲ್ಲಿ ಮಾರ್ಗದರ್ಶನ ಮಾಡುವುದಕ್ಕಾಗಿಯೇ ಇತಿಹಾಸ ಸಂಶೋಧನಾ ವಿಧಾನ ಎಂಬ ಒಂದು ಪ್ರತ್ಯೇಕವಾದ ಶಾಸ್ತ್ರವೇ ಬೆಳೆದು ಬಂದಿರುವುದರಿಂದ ಆ ಸೂತ್ರಗಳನ್ನು ಪ್ರಸ್ತುತ ಅಧ್ಯಯನದಲ್ಲಿ

ಅಳವಡಿಸಿಕೊಳ್ಳಲಾಗಿದೆ. ದತ್ತಾಂಶಗಳ ಸಂಗ್ರಹಣೆ, ಬಾಹ್ಯ ಮತ್ತು ಆಂತರಿಕ ವಿಮರ್ಶೆಯ ಸೂತ್ರಗಳು, ವಿಶ್ಲೇಷಣಾ ವಿಧಿಗಳು, ಜೋಡಣಾ ವಿಧಾನ, ನಿರೂಪಣಾ ತತ್ವ, ಸಂಪಾದನಾ ಕ್ರಮ ಮುಂತಾದವುಗಳನ್ನು ಪ್ರಸ್ತುತ ಸಂಶೋಧನೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ವಿಶೇಷವಾಗಿ ಕ್ಷೇತ್ರಕಾರ್ಯವನ್ನು ಕೈಗೊಂಡು ಪ್ರಶ್ನಾವಳಿ ಯೊಂದಿಗೆ ದತ್ತಾಂಶಗಳನ್ನು ಸಂಗ್ರಹಿಸಲಾಗಿದೆ.

ಪ್ರಸ್ತುತ ಜಾರಿಯಲ್ಲಿರುವ ಕಲ್ಯಾಣ ಯೋಜನೆಗಳು ಹಿಂದುಳಿದ ವರ್ಗಗಳ ಜನರಿಗೆ ತಲುಪಿ; ನಿಜವಾದ ಅನುಕೂಲವಾಗಬೇಕೆಂಬ ಉದ್ದೇಶದಿಂದ ಮತ್ತು ಅವರಿಗಾಗಿ ಇರುವ ಸೌಲಭ್ಯಗಳನ್ನು ಅವರಿಗೇ ತಲುಪಿಸುವ ದೃಷಿಯಿಂದ ಮೂರನೇ ಹಿಂದುಳಿದ ವರ್ಗಗಳ ಆಯೋಗವು ಸಲ್ಲಿಸಿದ ವರದಿಯನ್ನು ಹಿಂದಿನ ಆಯೋಗಗಳ ವರದಿ ಹಾಗೂ ಮೀಸಲಾತಿ ಆದೇಶಗಳೊಂದಿಗೆ ತೀವ್ರ ಪರಿಶೀಲನೆ ನಡೆಸಲಾಯಿತು ಮತ್ತು ಕೈಬಿಟ್ಟು ಹೋಗಿದ್ದ ಅತೀ ಹಿಂದುಳಿದ ಜಾತಿಗಳನ್ನು ಪ್ರಸ್ತುತ 17.09.1994ರ ಆದೇಶದಲ್ಲಿ ಪ್ರವರ್ಗ–I ಮತ್ತು ಪ್ರವರ್ಗ–2ಎ ಗುಂಪಿನಲ್ಲಿ ಸೇರಿಸಲಾಗಿದೆ. ವಿವಿಧ ಮಾನದಂಡಗಳನ್ವಯ ಕೈಗೊಳ್ಳಲಾದ ಸರ್ವೇಕ್ಷಣೆಯ ಹಿನ್ನೆಲೆಯಲ್ಲಿ ಕಣಿಯ ಸಮುದಾಯದವರು ಅತಿ ಹಿಂದುಳಿದ ಮತ್ತು ಜನಸಂಖ್ಯೆಯ ದೃಷ್ಟಿಯಿಂದ ಅಲ್ಪಸಂಖ್ಯಾತ ಸಮುದಾಯವಾಗಿದ್ದು; ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಬಹಳ ಹಿಂದುಳಿದ ವರ್ಗದವರಾಗಿದ್ದಾರೆಂದು ನಿರ್ಧರಿಸಲಾಗಿದೆ.ಇವರು ತಮ್ಮ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಇತರ ಜನಾಂಗದವರೊಡನೆ ಬೆರೆತು ಅವರ ಸಹಾಯ ಮತ್ತು ಸರ್ಕಾರದ ನೆರವಿನೊಂದಿಗೆ ಮುಖ್ಯವಾಹಿನಿಗೆ ಸೇರ್ಪಡೆಗೊಳ್ಳುವುದು ಅಗತ್ಯವೆಂದು ಹೇಳಬಹುದು.ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸಬಲೀಕರಣಗೊಳ್ಳುವ ಜಾಗೃತಿಯು ಕಣಿಯ ಸಮುದಾಯದವರಲ್ಲಿ ಕಾಯಾ ವಾಚಾ ಮನಸಾ ಉಂಟಾಗಬೇಕಿದೆ.ಅಂತೆಯೇ ಮೂರು ಹಿಂದುಳಿದ ವರ್ಗದ ಆಯೋಗಳ ವರದಿಗಳು ಮತ್ತು ಶಿಫಾರಸ್ಸುಗಳ ಅನುಷ್ಠಾನ ಸಂಬಂಧದ ಸರ್ಕಾರಿ ಆದೇಶಗಳಲ್ಲಿ ಹಿಂದುಳಿದಿರುವ ಕೆಲವು ಜಾತಿಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲಾಗಿತ್ತು.ಸರ್ಕಾರದ ಸೇವೆಯಲ್ಲಿ, ರಾಜಕೀಯ ವಲಯದಲ್ಲಿ ಮತ್ತಿತರ ಕ್ಷೇತ್ರಗಳಲ್ಲಿ ಹೆಚ್ಚಿನ ಪ್ರತಿನಿಧಿತ್ವ ಇರುವ ನಾಯಕ, ಬೇಡ ಮುಂತಾದ ಶಕ್ತಿಯುತ ಜಾತಿಗಳೊಂದಿಗೆ ಕಣಿಯ, ಸೋಲಿಗ, ಕಾಡುಕುರುಬ, ಜೇನುಕುರುಬ, ಬೆಟ್ಟಕುರುಬ, ಯರವ, ಇರುಳಿಗ ಮುಂತಾದ ಅತಿ ಹಿಂದುಳಿದ ಸಮುದಾಯಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿ ಗುಂಪು ಮಾಡಲಾಗಿರುವುದರಿಂದ, 'ಬಲಿಷ್ಠನಾದವ ಬದುಕುಳಿಯುವ' ಎಂಬಂತೆ ಕಣಿಯ ಜನಾಂಗಕ್ಕೆ ಮೇಲಿನವರ ಪ್ರಭಾವವಿಲ್ಲದೇ, ಸರ್ಕಾರಿ ಸೌಲಭ್ಯಗಳ ದೊರಕುವಿಕೆಯು ಬಹಳ ನಿರಾಶಾದಾಯಕವಾಗಿದೆ.ಆದುದರಿಂದ ಕಣಿಯ ಸಮುದಾಯದ ಕಲ್ಯಾಣಕ್ಕಾಗಿ ಇತರೆ ಹಿಂದುಳಿದ

ಜಾತಿ ಸಮುದಾಯಗಳಿಗೆ ಸ್ಥಾಪಿಸಿರುವಂತೆ ಕಣಿಯ ಅಭಿವೃದ್ಧಿ ನಿಗಮವನ್ನು ಸ್ಥಾಪಿಸುವುದು ಅತ್ಯಂತ ಅಗತ್ಯವಾದ ಬೇಡಿಕೆಯಾಗಿದೆ.

ಕೇವಲ ಆರ್ಥಿಕ ಯೋಜನೆಗಳ ಘೋಷಣೆ ಮತ್ತು ಅಂಕಿ ಅಂಶಗಳ ಪ್ರಕಟಣೆಗಳಿಂದ ಪ್ರತಿ ವರ್ಷ ವಿವಿಧ ಇಲಾಖೆಗಳು ವಿಶೇಷವಾಗಿ ಹಿಂದುಳಿದ ವರ್ಗಗಳ ಮತ್ತು ಸಮಾಜ ಕಲ್ಯಾಣ ಇಲಾಖೆಗಳು ಸಲ್ಲಿಸುವ ಪ್ರಗತಿಯ ವರದಿಗಳಿಂದ ಯಾವುದೇ ಸಕರಾತ್ಮಕ ಫಲಿತಾಂಶಗಳು ಸಿಗುವುದಿಲ್ಲ. ಹಿಂದುಳಿದ ವರ್ಗಗಳ ಜನರ ಪ್ರಸ್ತುತ ಬದುಕಿನ ವಿವಿಧ ಹಂತಗಳ ತುಲನಾತ್ಮಕ ಮತ್ತು ವೈಜ್ಞಾನಿಕ ಅಧ್ಯಯನ ನಡೆಸುವುದರೊಂದಿಗೆ; ಪ್ರಗತಿ ಹೊಂದಿದ ಜಾತಿ ಸಮುದಾಯಗಳು ಸ್ಥಿರವಾಗಿ ಮೀಸಲಾತಿ ಪಟ್ಟಿಯಲ್ಲಿಯೇ ಉಳಿಯದಂತೆ ನೋಡಿಕೊಳ್ಳುವುದು ಬಹಳ ಮುಖ್ಯವಾಗಿದೆ. “ಮೀಸಲಾತಿಯನ್ನು ಕುರಿತಾದ ಯಾವುದೇ ಕಲ್ಯಾಣ ಕಾರ್ಯಕ್ರಮಗಳು ಶಾಶ್ವತವಾಗಿ ಉಳಿಯಬಾರದು ಅಥವಾ ನಿರರ್ಥಕವೂ ಆಗಬಾರದು” ಎಂಬ ಮೂರನೆಯ ಹಿಂದುಳಿದ ವರ್ಗಗಳ ಆಯೋಗದ ಮುಖ್ಯಸ್ಥರಾಗಿದ್ದ ಶ್ರೀಚಿನ್ನಪ್ಪ ರೆಡ್ಡಿಯವರ ಅಭಿಪ್ರಾಯವು ಅತ್ಯಂತ ಅರ್ಥಗರ್ಭಿತ ಮತ್ತು ಸಮಂಜಸವಾಗಿದೆ.ಹೀಗೆ ಅನುಭವಾತ್ಮಕ ಅಧ್ಯಯನ ಮತ್ತು ಪರಿಮಣಾತ್ಮಕ ವಿಧಾನಗಳೊಂದಿಗೆ ಕ್ಷೇತ್ರಕಾರ್ಯದ ಮೂಲಕ ದತ್ತಾಂಶಗಳನ್ನು ಸಂಗ್ರಹಿಸಿಕೊಂಡು; ಪ್ರಸ್ತುತ ಸಂಶೋಧನೆಯಲ್ಲಿ ಸಮಗ್ರ ಭಾರತೀಯ ಕಣಿಯ ಜನಾಂಗದ ಇತಿಹಾಸ ಹಾಗೂ ಪರಂಪರೆಯನ್ನು ಅನ್ವಯಿಸಿಕೊಂಡು ಧಕ್ಷಿಣ ಕರ್ನಾಟಕದ ಕಣಿಯ ಸಮುದಾಯದವರ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತಿಗತಿಗಳ ಸ್ಥಿತ್ಯಂತರವನ್ನು ಕೂಲಂಕಶವಾಗಿ ಚರ್ಚಿಸಲಾಗಿದೆ.

ಹೀಗೆ ಭಾರತದ ಆದಿವಾಸಿ ಅಥವಾ ಬುಡಕಟ್ಟು ಜನಾಂಗಗಳಲ್ಲಿ ಒಂದಾಗಿರುವ ಕಣಿಯರು ಕಾಯಕ ಸಮುದಾಯವಾಗಿಯೂ ಸಾಮಾಜಿಕ ವ್ಯವಸ್ಥೆಯಲ್ಲಿ ಗುರುತಿಸಲ್ಪಟ್ಟಿದ್ದಾರೆ. ಬಹಳ ತಿರಸ್ಕಾರ ಹಾಗೂ ನಿರ್ಲಕ್ಷ್ಯತೆಗೆ ಒಳಗಾಗಿರುವ ಕಣಿಯ ಬುಡಕಟ್ಟು ಸಮುದಾಯದವರ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗಳ ಚಾರಿತ್ರಿಕ ಅಧ್ಯಯನವು ಇಂತಹ ನಿರ್ಲಕ್ಷ್ಯಗೊಳಪಟ್ಟ ಕಾಯಸ್ಥ ಸಮುದಾಯಗಳ ಜನಾಂಗೀಯ ಅಧ್ಯಯನವು ಶೋಷಿತ ಸಮುದಾಯಗಳ ಜೀವನ ಕ್ರಮದ ಶಾಸ್ತ್ರೀಯ ಹಾಗೂ ಕ್ರಮಬದ್ಧ ಅಧ್ಯಯನಕ್ಕೆ ಪೀಠಿಕೆಯಾಗುತ್ತದೆ. ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಬುಡಕಟ್ಟು ಸಮುದಾಯಗಳ ಕುಲಶಾಸ್ತ್ರೀಯ ಅಧ್ಯಯನವು ಕರ್ನಾಟಕದ ಸಮಗ್ರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅನನ್ಯತೆಯ ಇತಿಹಾಸ ರಚನೆಗೆ ಹೊಸ ಭಾಷ್ಯವನ್ನು ನೀಡುತ್ತದೆ. ತನ್ಮೂಲಕ ಶೋಷಣೆಗೊಳಪಟ್ಟ ಹಾಗೂ ಸಂಪೂರ್ಣವಾಗಿ ನಿರ್ಲಕ್ಷಿಸಿರುವ ವಿವಿಧ ಕಾಯಕ ಸಮುದಾಯಗಳಾದ ಅಗಸ, ಉಪ್ಪಾರ, ಗಾಣಿಗ, ಕುಂಬಾರ, ಕಮ್ಮಾರ, ಬಡಗಿ, ಅಕ್ಕಸಾಲಿಗ, ಈಡಿಗ,

ವಿಶ್ವಕರ್ಮ ಮತ್ತು ಬುಡಕಟ್ಟು ಸಮುದಾಯಗಳಾದ ಕಾಡು ಕುರುಬ, ಜೇನು ಕುರುಬ, ಬೆಟ್ಟ ಕುರುಬ, ಸೋಲಿಗ, ಎರವ, ಇರುಳಿಗ, ಓಡುಗ, ಮಲೆಕುಡಿಯ, ಕೊರಗ, ಮುಂತಾದವರ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ಕುರಿತು ದಾಖಲೀಕರಣ ಮಾಡುವ ಅಧ್ಯಯನ ಹಾಗೂ ಸಂಶೋಧನೆಗಳ ಸಾಧ್ಯಾಸಾಧ್ಯತೆಗಳಿಗೆ ಮುನ್ನುಡಿಯಾಗುವಂತ ಧನತ್ಮಾಕ ಫಲಶೃತಿಯನ್ನು ನಿರೀಕ್ಷಿಸಬಹುದಾಗಿದೆ. ತನ್ಮೂಲಕ ಕರ್ನಾಟಕದ ಸಮಗ್ರ ಮುಖ್ಯ ಸಂಸ್ಕೃತಿ ಮತ್ತು ಉಪಸಂಸ್ಕೃತಿಗಳ ಅನನ್ಯತೆಯ ಗಾಢತೆಯನ್ನು ಗುರುತಿಸಬಹುದು.

ಪರಾಮರ್ಶನ ಗ್ರಂಥಗಳು

1. ಜಿ.ವಿ.ನಾರಾಯಣಮೂರ್ತಿ (1975), ಭಾರತೀಯ ಇತಿಹಾಸ ಸಮೀಕ್ಷೆ, ಮೈಸೂರು
2. ಡಾ.ಸೂರ್ಯನಾಥ್‌ಕಾಮತ್ (1984), ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು
3. ಬಿ.ಆರ್.ಹಿರೇಮಠ (1986), ಶಾಸನಗಳಲ್ಲಿ ಕರ್ನಾಟಕದ ವರ್ತಕರು,ಧಾರವಾಡ
4. ಕುಮಾರ ವೆಂಕಣ್ಣ (1988), ಅಸ್ಪೃಶ್ಯರು (ಅನುವಾದ) (ಮೂಲ) ಅಂಬೇಡ್ಕರ್, ಬೆಂಗಳೂರು
5. ಡಾ.ಕರಿಶೆಟ್ಟಿ ರುದ್ರಪ್ಪ (1995), ಮ್ಯಾಸಬೇಡರು ಒಂದು ಅಧ್ಯಯನ, ಕ.ಸಾ.ಪ, ಬೆಂಗಳೂರು
6. ಡಾ.ಕೇಶವನ್ ಪ್ರಸಾದ್ ಕೆ.(ಸಂ) (1997), ಮಲೆ ಮಾದೇಶ್ವರ, ಹಂಪಿ
7. ಡಾ.ಇರ್ಫಾನ್ ಹಬೀಬ್, (ಸಂ)(1999), ಮಿಡೀವಲ್ ಇಂಡಿಯಾ, ಸಂ–1, ನ್ಯೂಡೆಲ್ಲಿ
8. ಗಂಗಾಧರ ದೈವಜ್ಞ (2000), ಬುಡಕಟ್ಟು ಸಮಾಜ–ಹುಟ್ಟು ಸಾವಿನ ನಡುವೆ, ಹಂಪಿ
9. ಡಾ.ಸಣ್ಣರಾಮ (2001), ಬುಡಕಟ್ಟು ಸಂಸ್ಕೃತಿ, ಹಂಪಿ
10. ಡಾ.ಪ್ರಭಾಕರ ಎ.ಎಸ್ (2001), ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಹಂಪಿ
11. ಡಾ.ಮೈತ್ರಿ ಕೆ.ಎಂ. (2002), ಬುಡಕಟ್ಟು ಕುಲ ಕಸುಬುಗಳು, ಹಂಪಿ
12. ಡಾ.ಎಸ್.ಚಂದ್ರಶೇಖರ್ (2006), ವಸಾಹತು ಕಾಲೀನ ಕರ್ನಾಟಕ, ಬೆಂಗಳೂರು
13. ಡಾ.ಮೊಗಳ್ಳಿ ಗಣೇಶ್ (2006), ಮೌಖಿಕ ಕಥನ, ಹಂಪಿ
14. ಡಾ.ಎಸ್.ಶೆಟ್ಟರ್ (2007), ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ, ಬೆಂಗಳೂರು
15. ಡಾ.ಗುರುಲಿಂಗಯ್ಯ ಎಂ. (2008), ಕಾಡು ಗೊಲ್ಲರು, ಬೆಂಗಳೂರು
16. ಡಾ.ನಾಗೇಶ್ ಎಚ್.ವಿ(2008), ಕರ್ನಾಟಕದ ಬುಡಕಟ್ಟುಗಳಲ್ಲಿ ನ್ಯಾಯ ತೀರ್ಮಾನ, ಧಾರವಾಡ
17. ಡಾ.ಬರಗೂರು ರಾಮಚಂದ್ರಪ್ಪ (2011), ಸಂಸ್ಕೃತಿ–ಉಪಸಂಸ್ಕೃತಿ, ಬೆಂಗಳೂರು
18. ಡಾ.ಅನಿತಾ(2012),ಆಧುನಿಕ ಮೈಸೂರಿನ ಇತಿಹಾಸದಲ್ಲಿ ನಾಲ್ವಡಿ ಕೃಷ್ಣರಾಜ, ಮೈಸೂರು

19. ಅ.ಸುಂದರ(ಪ್ರ.ಸಂ) (2012), ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ, ಮೈಸೂರು
20. ಡಾ.ಎಸ್.ಚಂದ್ರಶೇಕರ್ & ಡಾ.ಬಿ.ಸುರೇಂದ್ರರಾವ್(ಸಂ) (2016), ಕರ್ನಾಟಕದ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು, ಸಂ–5, ಬೆಂಗಳೂರು
21. ಡಾ.ವಾಸುದೇವ ಎಚ್.ಟಿ (2017), ಗ್ರಾಮ ಸಂಸ್ಕೃತಿ, ಬೆಂಗಳೂರು
22. ಡಾ. ವಿಜಯ್ ಪೂಣಚ್ಚ ತಂಬಂಡ (2022), ಕಾಡು ಮಕ್ಕಳ ಕೂಗು, ಬೆಂಗಳೂರು

English Books

1. Francis Buchanan (1807), A Journey from Madras through the countries of Mysore and Malbar, London
2. Col.Mecenzie (1828), The Mecenzie collections, Culcutta
3. Rev.G.Richter(1887), Castes and Tribes found in the province of Coorg
4. Venkatarango Katti, Gezetteer of the Bombay Presidency of 1893
5. Ramesh Datt (1906),The Economic History of India -British rule, London
6. Edgard Thurston & K.Rangachari (1909), the Caste and Tribes of Southern India, Madras
7. B.L.Rice (1909) Mysore and Coorg from Inscriptions, London
8. Mysore Archaeology Report of 1932 (Published in 1935) Bangalore
9. R.G.Collingwood (1946), The Idea of History, London
10. D.D.Kosambi (1965), The Cultural and civilization of Ancient India in historical outline, London
11. Peter A.clark (1966),The Journal of the Richard Hakluyat society, London
12. Dr. Romila Thapar (1966), A History of India, New Delhi
13. Smith C.T (1967), An Historical Geography of Western Europe, London
14. Dr.P.K Mishra (1969), Anthropological Survey of India, New Delhi
15. Dr.Bipan Chandr & others (1974), Freedom Struggle, New Delhi
16. Andrew Crowrk (1975), Research in Historical Geography, Washington
17. E.H.Carr (1983), What is History, london
18. Dr.Irfan Habib (ed:) (1992), Medieval India I, New Delhi
19. Wil Durant (1993), The story of civilization, London
20. Greogory (1993), Ideology of Science and Human, London

21.H.P Shashidharamurthy(1999),The Backward Classes Movement in Mysore-A Historical Background, Bangalore
22. Dr. Keshava (2004), The growth Profile among Jenu Kuruba, Kaadu Kuruba Tribes of Karnataka, Mysore
23. Dr.Upinder Singh (2015), A History of Ancient and Early Medieval India
24.M.N.Srinivas (2019), Social change in Modern India, New Delhi

ಪ್ರೊ.ನಿರ್ಮಲ್ ರಾಜು
ಮಾರ್ಗದರ್ಶಕರು

ಲೋಕೇಶ್ ಮೂರ್ತಿ.ಆರ್
ಸಂಶೋಧಕರು